ಶ್ರೀ ಶಿವಶರಣರಾದ ರುದ್ರಮುನಿ, ನೀಲಮ್ಮ
ಬಸವಣ್ಣ, ಸರ್ವಜ್ಞ ಇವರು ನುಡಿದ

ಕಲಿಯುಗದ

# ಕಾಲಜ್ಞಾನವು



HUBLI
Acc. No.
Reg. No.
MOORUSAVIRMATH
824
4637

ಪ್ರಕಾಶಕರು
ಟಿ. ನಾರಾಯಣ ಅಯ್ಯಂಗಾರ್
ಬುಕ್ ಸೆಲ್ಲರ್ ಅಂಡ್ ಪಬ್ಲಿಷರ್
ಬಳೇಪೇಟೆ, ಬೆಂಗಳೂರು-೨.

Price 0—6—0 1961 ಕ್ರಯ ೦-೬-೦

|| ಶ್ರೀಃ ||

ಶ್ರೀ ರುದ್ರಮುನಿಸ್ವಾಮಿ, ಬಸವಣ್ಣನವರು, ನೀಲಮ್ಮನವರು
ಮತ್ತು ಸರ್ವಜ್ಞಮೂರ್ತಿ ಇವರುಗಳಿಂದ ಹೇಳಲ್ಪಟ್ಟಿರುವ

# ಕಲಿಯುಗದ ಕಾಲಜ್ಞಾನವು

ಶ್ಲೋ || ನತ್ವಾ ಕತ್ವಾಯಿನೀ ಕಾಂತಂ ಕಾಲಕಾಲಂ ಕೃಪಾನಿಧಿಂ |
ವಕ್ಷಾಮಿ ಕಾಲಜ್ಞಾನಂಚ ಕಲಿಕಾಲ ವಿಲಾಸಿನಂ ||

ಮೃತ್ಯುಂಜಯನಾಗಿಯೂ, ಕರುಣಾ ಸಮುದ್ರನಾಗಿಯೂ, ಸರ್ವ ಭೂತಾಂತರ್ಯಾಮಿಯಾಗಿಯೂ, ನಿರ್ಮಲನಾಗಿಯೂ ಇರುವ ಪಾರ್ವತೀ ಪತಿಯನ್ನು ನಮಸ್ಕರಿಸಿ ಕಲಿಯುಗದ ಕಾಲ ವಿಲಾಸವೆಂಬ ಕಾಲಜ್ಞಾನವನ್ನು ಹೇಳುವೆನು :—

ಶ್ಲೋ || ಕಲೌ ಪಂಚ ಸಹಸ್ರಾಂತೇ ಜಾಯತೇ ವರ್ಣ ಸಂಕರಃ |
ಕಲೌ ಪ್ರಂಚ ಸಹಸ್ರಾಂತೇ ವಿಷ್ಣುಸ್ತ್ಯಕ್ಷತಿ ಮೇದಿನೀಂ ||

ಎಂಬ ರೀತಿಯಾಗಿ ಕಲಿಯುಗದ ಮೊದಲನೇ ಪಾದದಲ್ಲಿ ಐದು ಸಾವಿರ ವರ್ಷಗಳ ಅಂತ್ಯದಲ್ಲಿ ಜಾತಿಮತಗಳ ಸಾಂಕರ್ಯವಾಗುವುದೆಂತಲೂ, ಪ್ರಪಂಚ ಪಾಲಕನಾದ ಶ್ರೀ ವಿಷ್ಣುವು ಪೃಥ್ವಿಯನ್ನು ಬಿಡುವನೆಂತಲೂ, ಕಲಿಯುಗದಲ್ಲಿ ನಡೆಯುವ ಮಹಿಮೆಗಳನ್ನು ನಾರದಮಹರ್ಷಿಗೆ ಬ್ರಹ್ಮನು ಹೇಳಿದುದನ್ನು ಈಗ ಇಲ್ಲಿ ವಿವರಿಸುವರು.

ಸತ್ಯಲೋಕದಲ್ಲಿ ಒಂದಾನೊಂದು ದಿನ ಬ್ರಹ್ಮನು ವಾಣೀದೇವಿಯ ಸಮೇತ ಸಮಸ್ತ ದೇವತೆಗಳಿಂದಲೂ ಸ್ತೋತ್ರಾರ್ಹನಾಗಿ ಸಿಂಹಾಸನದಲ್ಲಿ ಕುಳಿತಿರಲು ಮುನಿಶ್ರೇಷ್ಠನಾಗಿಯೂ, ವೀಣಾಧರನಾಗಿಯೂ ಇರುವ ನಾರದ ಮುನಿಯು ಅಲ್ಲಿಗೆ ಬಂದು ಬ್ರಹ್ಮನಿಗೆ ನಮಸ್ಕಾರ ಮಾಡಿ ಸ್ತುತಿಸಿ ಕುಳಿತಕೊಂಡು "ಎಲೈ ಬ್ರಹ್ಮನೇ ನಿನ್ನಿಂದ ಕೃತ—ತ್ರೇತಾ—ದ್ವಾಪರ ಯುಗಗಳ ಮಹಿಮಾತಿಶಯವನ್ನು ಕೇಳಿದನು. ಆದರೆ ಈಗ ಕಲಿಯುಗದ ಮಹಿಮಾ ವಿಶೇಷಗಳನ್ನು ಕೇಳಬೇಕೆಂಬ ಆಸೆಯುಂಟಾಗಿದೆ" ಎಂದು ಪ್ರಾರ್ಥಿಸಲಾಗಿ ಬ್ರಹ್ಮನು ನಾರದನನ್ನು ಕುರಿತು ಕಲಿಯುಗದ ಧರ್ಮವನ್ನು ಹೇಳಿದನು ಎಂದು ಸೂತನು, ಶೌನಕಾದಿಗಳಿಗಿಂತೆಂದನು.

"ಎಲೌ ಶೌನಕಾದಿಗಳಿರಾ | ಕಲಿಯುಗದಲ್ಲಿ ಕಲಿಪ್ರಾಬಲ್ಯದ ಕಾರಣದಿಂದ ಧರ್ಮ, ಸತ್ಯಾದಿಗಳು ನಾಶವಾಗಿ, ಪಾಪಗಳು ಅಭಿವೃದ್ಧಿಯಾಗಿ ಬ್ರಹ್ಮಹತ್ಯೆ, ಶಿಶುಹತ್ಯೆ, ಭ್ರೂಣಹತ್ಯೆ, ಮಾತಾಪಿತೃ ಹಿಂಸೆ, ಸ್ವಾಮಿ ಗುರು ಭ್ರಾತೃ ಮಿತ್ರ ದ್ರೋಹಗಳು, ಸ್ವರ್ಣಸ್ತೇಯ, ಮದ್ಯಮಾಂಸಾದಿ ಭಕ್ಷಣಗಳು, ಇನ್ನೂ ಅನೇಕ ವಿಧವಾದ ಮಹಾ ಪಾಪಕೃತ್ಯಗಳನ್ನಾಚರಿಸುತ್ತ, ಜನರು ವ್ಯಭಿಚಾರಿಗಳಾಗಿ

REDMI NOTE 8 PRO

ಮತಧರ್ಮಗಳನ್ನು, ಬಿಟ್ಟು, ಕಾಮ, ಕ್ರೋಧ, ಲೋಭ, ಮೋಹ, ಶೋಕ
ಭ್ರಾಂತಿಪರವಶರಾಗಿ ಈಶ—ವಿಷ್ಣ್ವಾದಿ ದೇವತೆಗಳಲ್ಲಿ ಭಕ್ತಿಯನ್ನು ತೊರೆದ
ಶಾಂತಿ ದಯಾಶಮನ ಮಾಡಿ ವರ್ಜಿತರಾಗಿ ದುರ್ಮಾರ್ಗದಲ್ಲಿ ಪ್ರವೇಶಿಸುತ್ತಿರಲು
ಕಲಿಪುರುಷನು ಅತ್ಯಾನಂದದೊಡನೆ ತಾನು ಸಕಲ ಲೋಕಗಳನ್ನು ಮೋಹಿ
ರಲು, ಲೋಕದವರು ಧರ್ಮಾರ್ಥಿಗಳನ್ನು ಬಿಟ್ಟು ಪಾಪಮಾರ್ಗ ನಿರತರಾಗಿರುವರು
ಈ ರೀತಿಯಾಗಿ ಕಲಿಯು ಪ್ರಬಲವಾಗಲು, ಧರ್ಮಪುರುಷನು ಅತಿ ಖಿನ್ನನಾ
ವನಗುಹಾದಿಗಳನ್ನೂ ರಹಸ್ಯವಾದ ನದೀ ಮೂಲಗಳನ್ನೂ, ದೇವಾಲಯಗಳನ್ನೂ
ತುಳಸೀ ಪದ್ಮ ವನಗಳನ್ನೂ ಗಂಗಾದಿ ಜಲಸ್ಥಳಗಳಲ್ಲಿ ಬೇಧಿಸಲಾಗದ ಸ್ಥ
ಗಳನ್ನೂ ಹೊಕ್ಕು ಕಲಿಭೀತಿಯಿಂದ ಅಡಗಿಕೊಳ್ಳಲು ಕಲಿಯು ಸ್ವಪ್ರಕಾಶವನ್ನು
ಹೆಚ್ಚಿಸುವನು. ಘೋರಪಾಪಿಗಳೇ ಜನಿಸಿ ಧರ್ಮವನ್ನು ನಿರಾಕರಿಸುತ್ತಾ ಬರಲು
ಯಜ್ಞಯಾಗಾದಿ ಸತ್ಕರ್ಮಗಳೆಲ್ಲದಂತಾಗಿ ಭೂಭಾರವು ಹೆಚ್ಚುವುದು. ಆಗ
ಭೂದೇವಿಯು ಬಾಧೆಯನ್ನೂ ಭಾರವನ್ನೂ ಸಹಿಸಲಾರದೆ ಭೀತಿಯಿಂದ ಗೋ
ರೂಪಧರಳಾಗಿ ಸ್ವರ್ಗವನ್ನು ಕುರಿತು ಅನೇಕ ದೇವತೆಗಳಿಂದೊಡಗೂಡಿ ಸಭಾ
ಸೀನನಾದ ಇಂದ್ರನ ಸಮೀಪಕ್ಕೆ ಹೋಗಿ ಬೀಳಲು, ಅಲ್ಲಿದ್ದ ದೇವತೆಗಳು ಗಾಬರಿ
ಯಿಂದ ಭ್ರಾಂತರಾದರು. ಇಂದ್ರನು ಪೀಠದಿಂದಿಳಿದು ಬಂದು ಭೂದೇವಿ
ಯನ್ನು ಮೇಲಕ್ಕೆತ್ತಿ ಸಂತೈಸಿ, "ಎಲೈ ತಾಯೇ ಏನು ಕಾರಣ ಶೋಕಿಸುವೆ?
ನಿನ್ನ ಅಂಗಗಳು ಕುಂದಲು ಕಾರಣವೇನು ?" ಎನಲು ಭೂದೇವಿಯು "ಎಲೈ
ಇಂದ್ರನೇ ಭೂಲೋಕದಲ್ಲಿ ಜನರು ಸ್ವಧರ್ಮವನ್ನು ಬಿಟ್ಟು ಯಜ್ಞಯಾಗಾದಿ
ರಹಿತರಾಗಿಯೂ. ಜಾರ ಚೋರತ್ವಾದಿಗಳಿಂದ ಸಹಿತರಾಗಿಯೂ, ಸತ್ಕರ್ಮಾನು
ಷ್ಠಾನದೂರರಾಗಿಯೂ, ದುರ್ಮಾರ್ಗ ಪ್ರವರ್ತಕರಾಗಿಯೂ ಇರುವುದರಿಂದ
ಅವರ ಭಾರವನ್ನು ತಾಳಲಾರದೆ ನಿನ್ನ ಸಮೀಪಕ್ಕೆ ಬಂದೆನು. ಇದಕ್ಕೆ ತಕ್ಕ
ಉಪಾಯವನ್ನು ಯೋಚಿಸಿ, ನನ್ನ ಭಾರವನ್ನಿಳಿಸಬೇಕು." ಎನಲು ಇಂದ್ರನು
ಚಿಂತಾಕ್ರಾಂತನಾಗಿ, ಏನೂ ತೋರದೆ ದೇವತೆಗಳಿಂದಲೂ ಭೂದೇವಿಯಿಂದಲೂ
ಕೂಡಿ ಸತ್ಯಲೋಕವನ್ನು ಸೇರಿ ಬ್ರಹ್ಮನಿಗೆ ನಮಸ್ಕರಿಸಿ, ಸ್ತುತಿಸಿ, ಭೂದೇವಿಯ
ದುಃಖವನ್ನೂ ದೇವತೆಗಳಿಗುಂಟಾಗಿರುವ ಭೀತಿಯನ್ನೂ ಬಿನ್ನವಿಸಲು, ಆ
ಬ್ರಹ್ಮನು ಚಿಂತಿಸಿದವನಾಗಿ ಇಂದ್ರಾದಿಗಳೊಡನೆ ಕೈಲಾಸವಂ ಪೊಕ್ಕು ಗೌರೀ
ಸಮೇತನಾದ ಶಂಕರನನ್ನು ಕುರಿತು ಕೈಜೋಡಿಸಿಕೊಂಡು "ಎಲೈ ಸರ್ವಲೋಕ
ರಕ್ಷಕನಾದ ಶಂಕರನೇ, ಚಂದ್ರಚೂಡನೇ ರಕ್ಷಿಸು" ಎಂದು ಬಹು ವಿಧದಿಂದ
ಪ್ರಾರ್ಥಿಸಲು, ಪರಮೇಶ್ವರನು ಬ್ರಹ್ಮೇಂದ್ರಾದಿಗಳ ಕಾರ್ಯವನ್ನು ತಿಳಿದು, ಅವ
ರೊಡನೆ ವೈಕುಂಠವನ್ನು ಪ್ರವೇಶಿಸಿ ಲಕ್ಷ್ಮೀಲೋಲನಾದ ಶ್ರೀ ವಿಷ್ಣುವನ್ನು ಕಂಡು
ಸ್ತುತಿಸಲು, ವಿಷ್ಣುವು ಪರಮೇಶ್ವರನನ್ನು ಸತ್ಕರಿಸಿ, ಉಚಿತಾಸನದಲ್ಲಿ ಕುಳ್ಳಿರಿಸಿ

ದೇವತೆಗಳ ಕುಶಲಗಳನ್ನು ವಿಚಾರಿಸಿ, ಇಂದ್ರಾಜ್ಞೆಯಿಂದ ಮುಂಭಾಗದಲ್ಲಿ ಅಂಜ
ಲೀಬದ್ಧಳಾಗಿ ಶೋಕಿಸುತ್ತಾ, ನಿಂತಿರುವ ಭೂದೇವಿಯು ದುಃಖವನ್ನು ವಿಚಾರಿಸಿ
ತಿಳಿದುಕೊಂಡು, ಮಂದಹಾಸದಿಂದ ಪರಮೇಶ್ವರನನ್ನು ನೋಡಿ ಇದಕ್ಕೆ ತಕ್ಕ
ಉಪಾಯವೇನು ? ಈಗ ಏನು ಮಾಡಬೇಕೆಂದು ಕೇಳಲು ಆ ಪರಶಿವನು ತನ್ನ
ಅಭಿಪ್ರಾಯವನ್ನು ಸೂಚಿಸಿದನು, ಬ್ರಹ್ಮಾದಿಗಳು ಅದಕ್ಕೆ ಸಮ್ಮತಿಸಿದರು.
ಶ್ರೀಹರಿಯು ಭೂದೇವಿಯನ್ನು ನೋಡಿ " ಅಮ್ಮಾ ! ಭೂಭಾರವು ಪರಿಹಾರವಾಗ
ವುದಕ್ಕಾಗಿ ದುಷ್ಟರನ್ನು ನಾಶಮಾಡಿ, ಧರ್ಮವನ್ನು ಧರಿಸಿ ನಿನ್ನನ್ನು ಸಂತೋಷ
ಪಡಿಸುವೆನು " ಎಂದು ಸಂತೈಸಿ ಕಳುಹಿ ಬ್ರಹ್ಮನನ್ನು ಕುರಿತು ಇಂತೆಂದನು:—

"ಎಲೈ ಬ್ರಹ್ಮದೇವನೆ, ಕಲಿಯುಗದಲ್ಲಿ ಐದು ಸಾವಿರ ವರ್ಷವಾದ ಮೇಲೆ
ಅತಿಯಾಗಿ ಮೆಚ್ಚಿ ಮೆರೆಯುತ್ತ ಘೋರವಾಗಿರುವ ದುಷ್ಟರನ್ನು ಸಂಹರಿಸಿ
ಭೂಭಾರವನ್ನು ತಗ್ಗಿಸುವುದಕ್ಕಾಗಿ ನಾನು ಅವತರಿಸುವೆನು, ಆಗ ರುದ್ರಾಂಶ
ಸಂಭೂತಗಳಾದ ರೋಗ ಪೀಡಾದಿಗಳು ಭೂಲೋಕದಲ್ಲಿ ಬಹಳವಾಗಿ ಬೆಳೆಯಲಿ.
ಘೋರವಾದ ಕ್ಷಾಮಡಾಮರಗಳು ಉಂಟಾಗಲಿ ಇಂದ್ರನೂ ಅವನ ಅಧೀನದಲ್ಲಿ
ರುವ ಗ್ರಹಗಳೂ ಸೇರಿ ಭೂಲೋಕದಲ್ಲಿರುವ ಸತ್ಯ ಧರ್ಮಗಳನ್ನು ಸೆಳೆದು ಭೂಮಿ
ಯನ್ನು ನಿಸ್ಸಾರವಾಗಿಮಾಡಿ ಭೂಭಾರವನ್ನು ತಗ್ಗಿಸುವುದಕ್ಕಾಗಿ ನಾನು ಮಾಡುವ
ಕಾರ್ಯಕ್ಕೆ ಸಹಾಯಕರಾಗಲಿ.

ಯಾವಯಾವ ಕಾಲದಲ್ಲಿ ಅಧರ್ಮ ಹೆಚ್ಚುವುದೋ ಆಯಾ ಕಾಲದೊಳು
ಸ್ವಾಂಶದಿಂದ ಅವತರಿಸಿ ಸಕಲ ರೂಪಿನಿಂದ ಭೂಭಾರವನ್ನು ತೊಲಗಿಸುವೆನು.
ಇನ್ನು ನೀವು ತೆರಳಿರೆಂದು ಅನುಜ್ಞೆಯನ್ನು ಕೊಡಲು, ಸರ್ವರೂ ತಮ್ಮ ತಮ್ಮ
ಸ್ಥಾನಗಳನ್ನು ನಿರ್ವಹಿಸಲೋಸುಗ ಇಂದ್ರನಗುರುವಾದ ಬೃಹಸ್ಪತ್ಯಾಚಾರ್ಯರನ್ನು
ಕರೆಯಿಸಿ, ಅರ್ಘ್ಯಪಾದ್ಯಗಳಿಂದ ಪೂಜಿಸಿ ಎಲೈ ಗುರುವೆ ಶ್ರೀ ವಿಷ್ಣುವಿನ
ಅನುಜ್ಞೆಯಂತೆ ಭೂಭಾರವನ್ನು ತಗ್ಗಿಸಲು ತಕ್ಕ ಉಪಾಯ ಮಾಡಬೇಕೆನ್ನಲು,
ಗುರುವು ಎಲ್ಲವೂ ಸಿದ್ಧವಾಗಿದೆಂದು ನುಡಿದನು. ಇಂದ್ರನು ಚಿತ್ರಕನಿಂದ ನವಗ್ರಹ
ಗಳನ್ನೂ, ಅಷ್ಟದಿಕ್ಪಾಲಕರನ್ನೂ ಪರ್ಜನ್ಯನನ್ನೂ ಕರೆಯಿಸಿ, ಎಲಾ ಸಭಾನಾಯಕರ
ಭೂಭಾರ ನಿವಾರಣೆಯ ಕೃತ್ಯ ನಿಮ್ಮೆಲ್ಲರಿಗೂ ಸೇರಿರುವುದು. ಆದುದರಿಂದ ನಿ
ಗಳೆಲ್ಲರೂ ನಿಮ್ಮನಿಮ್ಮ ಕಾರ್ಯದಲ್ಲಿ ಜಾಗ್ರತೆಯಾಗಿರಬೇಕೆಂದು ಹೇಳಿ ಪರ್ಜನ್ಯನನ
ಕುರಿತು ಮೇಘಾಧಿಪತಿಯೇ ಮನುಷ್ಯರಿಗೆ ಅನ್ನವೇ ಪ್ರಾಣಾಧಾರಕ್ಕೆ ಮುಖ್ಯ
ಕಾರಣವಾಗಿರುವುದರಿಂದ ನೀನು ಕಲಿಯುಗದ ಒಂದನೇ ಪಾದದಲ್ಲಿ ಐ
ಸಹಸ್ರ ವರ್ಷಗಳು ಕಳೆಯುವುದರೊಳಗಾಗಿ ದುರ್ಮುಖಿ ಸಂವತ್ಸರದ ಪ್ರಾ
ಕಾಲದಿಂದ ಶಾರ್ವರೀ ಸಂವತ್ಸರದ ಪರ್ಯಂತವೂ ಈ ಕಲಿಯುಗದಲ್ಲಿ ಅಧರ್ಮ

REDMI NOTE 8 PRO
2021/10/6 14:3

ಪ್ರಬಲವಾಗುವುದರಿಂದ ದೇಶಾನುಗುಣವಾಗಿ ಆಗಾಗ್ಗೆ ಕ್ಷಾಮಾದಿಗಳುಂಟಾಗು ವಂತೆ ಭೂಮಿಯ ಸಾರವನ್ನು ಸೆಳೆದು ಕಾಲಕಾಲದೊಳು ವರ್ಷಗಳು ವರ್ಷಿಸ ದಂತೆಯೂ, ನದೀನದೀಗಳಲ್ಲಿಯೂ. ವಾಪೀಕೂಪ ತಟಾಕಾದಿಗಳಲ್ಲಿಯೂ, ಜಲ ರಹಿತವಾಗಿರುವಂತೆಯೂಮಾಡಿ ಕೆಲವೆಡೆಯೊಳು ವೃಷ್ಟಿರಹಿತವಾಗಿಯೂ, ಕೆಲವೆಡೆ ಯಲ್ಲಿ ಅತಿವೃಷ್ಟಿಯಿಂದ ಪಟ್ಟಣ ಗ್ರಾಮಗಳನ್ನೂ ಮುಳುಗಿಸುತ್ತಲೂ, ದುರುಳರಿ ರುವ ಸ್ಥಳದಲ್ಲಿ ಸಿಡಿಲಿನಿಂದಲೂ, ರಕ್ತವರ್ಷದಿಂದಲೂ, ಖಂಡವೃಷ್ಟಿಗಳಿಂದಲೂ, ದುಷ್ಟರನ್ನು ಮರ್ಧನ ಮಾಡಿ, ಧರ್ಮವನ್ನು ಪ್ರಬಲಪಡಿಸಿರೆಂದು ಆಜ್ಞಾಪಿಸಿ, ಚಂಡಮಾರುತನನ್ನು ನೋಡಿ, ಎಲೈ ವಾಯುವೇ, ನೀನು ಸುಂಟರಗಾಳಿಯಿಂದ ಗಿರಿಗಳು ಒಡೆಯುವಂತೆ ಬೀಸುತ್ತಲೂ, ಜಲಘೋಷಣೆಯನ್ನು ಮಾಡುತ್ತಲೂ ದುಷ್ಟರನ್ನು ನಾಶಪಡಿಸೆಂದು ಆಜ್ಞೆಗೈದು, ಎಲೌ ನವಗ್ರಹಗಳಿರಾ;—

ಕಲೌ ಪಂಚ ಸಹಸ್ರಾಂತೇ ಜಾಯತೇ ವರ್ಣಸಂಕರಃ ||

ಎಂಬ ರೀತಿಯಾಗಿ ಕಲಿಯುಗದ ಪ್ರಥಮ ಪಾದದೊಳು ಐದು ಸಾವಿರ ಸಂವತ್ಸರಗಳು ಕಳೆದಮೇಲೆ ವಿಕಾರಿ ಸಂವತ್ಸರ ಕಾರ್ತೀಕ ಬಹುಳ ತ್ರಯೋದಶಿ ಯಿಂದ ಮಾರ್ಗಶಿರ ಶುಕ್ಲ ಪ್ರಥಮಾ ಪರ್ಯಂತರವೂ ಎಲೈ ಸೂರ್ಯ, ಚಂದ್ರ ಅಂಗಾರಕ, ಬುಧ, ಗುರು, ರಾಹುಗಳೇ ನೀವು ಆರು ಗ್ರಹಗಳು ಮಾತ್ರ ಕ್ರೂರ, ಗ್ರಹಾಧಿಪತ್ಯದಿಂದ ವೃಶ್ಚಿಕ ರಾಶಿಯನ್ನು ಪ್ರವೇಶಿಸುವರಾಗಿ.

ವೃಶ್ಚಿಕ ರಾಶಿಯಲ್ಲಿ ಗ್ರಹದ್ವಯಗಳ ಯೋಗವು ಸಂಭವಿಸಿದರೆ ರಾಜಕ್ಷೋಭೆ ಮತ್ತು ಪ್ರಜಾಕ್ಷೋಭೆಯೂ, ಗ್ರಹತ್ರಯ ಯೋಗದಿಂದ ಕ್ಷೋಭೆ ಅನರ್ಥಗಳೂ, ಪ್ರಜಾನಾಶವೂ, ಗ್ರಹಪಂಚಕಗಳ ಯೋಗದಿಂದ ಸಮಸ್ತ ರಾಜರುಗಳ ನಾಶ ನವೂ, ಅಷ್ಟಗ್ರಹ ಯೋಗದಿಂದ ಪ್ರಳಯವೂ ಸಂಭವಿಸುವುದರಿಂದ ನೀವು ಆ ಕಾಲದಲ್ಲಿ ಪ್ರಳಯಾವಕಾಶವನ್ನು ಕೊಡದೆ ಷಷ್ಟಗ್ರಹ ಯೋಗವು ವೃಶ್ಚಿಕ ರಾಶಿ ಯಲ್ಲಿದ್ದಾಗ ನೀವುಗಳು ನಿಮ್ಮ ನಿಮ್ಮ ಸಾಮರ್ಥ್ಯಗಳನ್ನು ತೋರಿಸಿ ಎಂದು ಮರಣಭಯ, ಚೋರಭಯ, ಅಗ್ನಿರೋಗ ಮುಂತಾದ ಬಾಧೆಗಳನ್ನುಂಟುಮಾಡಿ, ರಕ್ತಪ್ರವಾಹವನ್ನು ಸುರಿಸಿ, ದುರ್ಜನರನ್ನು ಧ್ವಂಸಮಾಡಿ, ಧರ್ಮಕ್ಕೆ ಸಹಾಯ ಮಾಡುವರಾಗಿ ಆ ಮಹಾ ಕ್ಷಾಮದಲ್ಲಿ ಗ್ರಹಣಗಳುಂಟಾಗಿ ಪೀಡೆಯಿಂದಲೂ, ಪಿಶಾಚಿಗಳಿಂದಲೂ ಮಹಾ ರೋಗಗಳಿಂದಲೂ ಧರ್ಮ ದೂಷಕರು ಹತರಾಗುವರು ಎಂದು ಹೇಳಿದನು.

ಇಂದ್ರನು ನಕ್ಷತ್ರಾದಿ ದೇವತೆಗಳನ್ನು ನೋಡಿ, ನೀವು ಉಲ್ಕಾಪಾತಗಳನ್ನೂ ರಾತ್ರಿಕಾಲದಲ್ಲಿ ಧೂಮಕೇತುಗಳನ್ನೂ, ಕೆಂಡಗಳ ಮಳೆಯನ್ನೂ ಸುರಿಸಿ ದುರುಳರು

ಹಾ ಹಾ ಎಂದು ತಪಿಸುವಂತೆ ನೋಡಿ, ಮಹಾತ್ಮರಾದ ಸಾಧುಗಳೂ, ಗುರುಗಳೂ ದೇವತೆಗಳೂ ಇವರ ಕಣ್ಣೀರು ಭೂಮಿಯಲ್ಲಿ ಬಿದ್ದರೆ ಮಹಾಕ್ಷಾಮವೂ, ಮರಣವೂ ದುಃಖವೂ ದೇಶಕ್ಕೆ ಉಂಟಾಗುವುವು. ಆದುದರಿಂದ ಭೂಲೋಕದಲ್ಲಿ ಸಾಧುಗಳ ಕಣ್ಣೀರು ಹರಿಯುತ್ತಿರುವುದು. ಎಲೈ ಯಮನೆ, ನಿನ್ನ ಸೈನ್ಯವನ್ನು ಕರೆಸೆನಲು ಯಮನಾಜ್ಞೆಯಂತೆ ರಾಜಯೋಗ, ಉಪರೋಗ, ಮಹಾರೋಗ, ಈ ಇಪ್ಪತ್ತೇಳು ಕೋಟಿ ಸೈನ್ಯಗಳೊಳಗೂಡಿ ತಮ್ಮ ತಮ್ಮ ಪ್ರತಾಪಗಳನ್ನು ಹೊಗಳುತ್ತಾ ಆರ್ಭಟಿಸಲು ದೇವೇಂದ್ರನು ನೋಡಿ ಬೆರಗಾಗಿ ಇವುಗಳೆಲ್ಲವೂ ಹೊರಡಲು ನಿಮಿಷ ಮಾತ್ರದಲ್ಲಿ ಭೂಭಾರವು ತೊಲಗುವುದೆಂದು ನಿಶ್ಚಯಿಸಿ, ವೈದ್ಯಾಧಿಪತಿ ಯಾದ ಧನ್ವಂತರಿಯನ್ನು ನೋಡಿ, ಎಲೈ ಧನ್ವಂತರಿಯೇ, ನರರು ಮಾಡುವ ವೈದ್ಯಗಳು ನೆರವೇರದಂತೆ ಪರಮೌಷಧಿಗಳ ಸಾರವನ್ನು ಸೆಳೆಯುವನಾಗೆಂದು ಹೇಳಿ ಕಳುಹಲು ಅವನು ಇಂದ್ರಾಜ್ಞೆಯನ್ನು ಪಡೆದು, ಹೊರಟು ಹೋದನು. ಆಗ ಬ್ರಹ್ಮನು ಮಂತ್ರಗಳನ್ನು ನೋಡಿ, ನಿಮ್ಮ ಶಕ್ತಿಗಳೆಲ್ಲವನ್ನೂ ಸೆಳೆಯುವರಾಗಿ ಎನ್ನಲು ಶ್ರೀ ಮಹಾವಿಷ್ಣುವು ವೈಷ್ಣವ ಜರಸ್ಫೋಟಕ, ವಜ್ರಕೀಟಕ ವೈಷ್ಣವಶೂಲೆ ಮೊದಲಾದ ರೋಗಗಳನ್ನು ಕಳುಹಲು, ಈಶ್ವರನು ತನ್ನ ಕ್ರೂರಗಳಾದ ಶಕ್ತಿಗಳನ್ನು ಕರೆಯಿಸೆಂದು ವೀರಭದ್ರನಿಗಾಜ್ಞಾಪಿಸಲು, ಆ ಶಕ್ತಿಗಳು ಬಂದು ಈಶ್ವರನನ್ನು ಸ್ತುತಿಸಿ ತಮ್ಮ ಪ್ರತಾಪಗಳನ್ನು ಹೇಳಿ ಈಶ್ವರನಿಂದಾಜ್ಞಾಪಿಸಲ್ಪಟ್ಟ ಪೂರ್ವ ದಿಕ್ಕಿ ನಿಂದ ಶೂಲಗಳು, ಮಹೇಶ್ವರಿಶಕ್ತಿಯು, ಪಶ್ಚಿಮ ದಿಕ್ಕಿನಿಂದ ಸ್ಫೋಟಕಾದಿಗಳು, ದಕ್ಷಿಣದಿಂದ ಜ್ವರ-ದಾಹ-ವಾಂತಿಗಳು, ಉತ್ತರದಿಕ್ಕಿನಿಂದ ಸನ್ನಿಪಾತ ರೋಗ ಗಳು ಬರಲು ಆಗ ಕ್ಷಾಮಡಾಮರಗಳು ತಲೆ ಎತ್ತಿದವು. ಕೆಂಡದ ಮಳೆಗಳಿಂದ ಜನರು ನಾಶವಾಗುತ್ತಲೂ, ಖಂಡಗಳೂ, ಧೂಮಕೇತು ಮಹೋತ್ಪಾತಕ ಮಳೆ ಗಳು ಕ್ಷಾಮ ಕಾಲದಲ್ಲಿ ವಾಂತಿ ಭ್ರಾಂತಿ ರೋಗಗಳೂ ದುರ್ಭಿಕ್ಷ ದುಃಸ್ವಪ್ನ ದುಃಖ ಗಳೂ ಗರ್ಭರೋಗ ಮಹಾ ರೋಗಗಳೂ ವ್ಯಾಪಿಸಿದುವು. ಆ ಸಮಯದಲ್ಲಿ ಶ್ರೀ ಮಹಾವಿಷ್ಣುವು ತನ್ನ ಮಹಿಮಾತಿಶಯಗಳನ್ನು ನಿಲ್ಲಿಸುವನು. ಜನಗಳೆಲ್ಲರೂ ಮಹಾ ಪಾಪಿಗಳಾಗುವರು. ಆಗ ದುರ್ಗತಿಯು ಹೇಗಾಗುವುದೋ ಅದನ್ನು ಹೇಳ ಬೇಕೆಂದು ಕೇಳಿದ ನಾರದನನ್ನು ಕುರಿತು ಬ್ರಹ್ಮನು ಹೇಳಿದ ಕಾಲಜ್ಞಾನವನ್ನು ಸೂತನು ಶೌನಕಾದಿ ಮುನಿಗಳಿಗಿಂತೆಂದನು.

ಎಲೈ ಶೌನಕಾದಿ ಮುನಿಗಳೇ ! ಯಮನು ಗೋವಧೆ ಮಾಡುವವರನ್ನು ಎಳೆ ತರಿಸಿ ಕೊರಳನ್ನು ಕೊಯಿಸುವನು. ಪರಸ್ತ್ರೀಯನ್ನು ಮೋಹಿಸಿದ ಕಡುಪಾಪಿ ಗಳಿಗೆ ಕೆಂಪಾಗಿ ಕಾಯಿಸಿರು ಲೋಹ ಪ್ರತಿಮೆಯನ್ನು ತಬ್ಬಿಸುವನು, ಈ ರೀತಿ ಘೋರ ಪಾಪಿಗಳು ಬಾಧೆಯನ್ನನುಭವಿಸುತ್ತಾ ತಾವು ಸನ್ಮಾರ್ಗ ಅನುಸರಿಸದೆ

ಹೋದುದರಿಂದ ನರಕಿಗಳಾದವೆಂದು ದುಃಖಿಸುವರು. ಇನ್ನು ಧರ್ಮವೇ ಸತ್ಯ ಅದನ್ನು ಆಚರಿಸಬೇಕೆಂದು ಯೋಚಿಸುವರು. ಈ ಪ್ರಕಾರ ದುರ್ಮುಖಿ ಮೊದಲು ಕ್ಷಾಮಡಾಮರಗಳು ಅಭಿವೃದ್ಧಿಯಾಗಿ ಲೋಕದೊಳು ಮಳೆಗಳು ಕೈಗೂಡದೆ ಅಗ್ನಿಭಯಾದಿಗಳು ಹೆಚ್ಚಿ ಮಹಾ ರೋಗಗಳುಂಟಾಗಿ ಧಾನ್ಯಗಳು ಪ್ರಿಯವಾಗಿ ಕಳ್ಳತನ ಮೊದಲಾದವು ಅಧಿಕವಾಗುವುವು. ಅನೇಕ ಜನಗಳು ರೋಗದಿಂದ ನಾಶವಾಗುವರು. ಆದರೆ ದೇವತಾರಾಧನೆಗಳಿಂದ ಸ್ವಲ್ಪ ಉಪಶಮನವಾಗುವುದು.

ಎಲೈ ನಾರದನೇ, ಈ ರೀತಿಯಾಗಿ ಭೂದೇವತೆಗೆ ಪರ್ವತಾದಿಗಳಿಗಿಂತಲೂ ಪಾಪಿಗಳ ಭಾರವೇ ಅಧಿಕವಾಗಿರುವುದರಿಂದ ಧರ್ಮನಿರತನಾಗಿ ದಯಾಶಾಂತಿಗಳೊಡಗೂಡಿ ವೇದಾಂತ ವಿಚಾರವನ್ನು ಮಾಡಿ ಉತ್ತಮವಾದ ವರ್ಣಾಶ್ರಮ ಧರ್ಮಗಳನ್ನಾಚರಿಸುತ್ತಾ ಪಾಪಭೀತನಾಗಿ ಇರುವ ನರನಿಗೆ ಯಾವ ಭಯವೂ ಇಲ್ಲ. ಇನ್ನು ದೇವತಾ ಪೂಜೆ, ನವಗ್ರಹ ಪೂಜೆ ಮೊದಲಾದುವುಗಳನ್ನು ಮಾಡುತ್ತಲೂ, ಮಾಡಿಸುತ್ತಲೂ ಧರ್ಮಪರಾಯಣನಾಗಿರುವವನಿಗೆ ನರಕ ಬಾಧೆಯು ಸಂಭವಿಸುವುದಿಲ್ಲವೆಂದು ಬ್ರಹ್ಮನು ನಾರದನಿಗೆ ಹೇಳಿದನೆಂದು ಸೂತನು ಶೌನಕಾದಿಗಳಿಗೆ ನಿರೂಪಿಸಿದನು.

|| ಶ್ರೀ ಗುರುಭ್ಯೋ ನಮಃ ||

# ಶ್ರೀ ರುದ್ರಮುನಿಸ್ವಾಮಿಗಳ ಕಾಲಜ್ಞಾನವು

ಕಂದ॥ ಶ್ರೀ ಮಾಧವನಂ ವಿಧಿಯಿಂ | ಕಾಮಾರಿಯು ಶ್ರೀಯುಮಾಂಬಿಕಾ ವಾಗ್ದೇವಿ |
ದ್ವೈಮಾತುರ ಗ್ರಹಗಣಮಂ | ಪ್ರೇಮದೆ ಮಣಿದೆರಗಿ ಭಜಿಪೆನೀಯಲಿ ಶುಭಮಂ ||

ಆದಿ, ಅನಾದಿ, ಅಂತರ, ಅಬುರದ, ತಮಂದ, ಅಂಡಜ, ವಾರಿಜ, ಭಿನ್ನಯುಕ್ತ, ಅಯುಕ್ತ, ಮಣಿರಣ, ಮಾನ್ಯರಣ, ವಿಶಾವಸು, ಅಲಂಕೃತ, ಕೃತ, ತ್ರೇತಾಯುಗ, ದ್ವಾಪರಯುಗ, ಕಲಿಯುಗ, ಕಲಿಯುಗದಲ್ಲಿ ಬಸವಣ್ಣನೇ ಭಕ್ತ, ಪ್ರಭುದೇವರೇ ಜಂಗಮ ಇಂತೆಂಬ ಭೇದವಲ್ಲ ನೋಡಯ್ಯಾ ಭಕ್ತಿಯೇ ಪ್ರಬಲವನ್ನುಂಟುಮಾಡಬೇಕೆಂದು ಮುಂದಿಗೆ ಮಾದರಸರು ಮಾದಲಾಂಬಿಕೆ ಗರ್ಭದಲ್ಲಿ ಉದ್ಭವಿಸಿ. ತಂಡ ತಂಡ ನಾಮಕಿತವಂ ಕೈಗೊಂಡು ಬಸವನ ಪ್ರಿಯ ಕೂಡಲ ಚನ್ನಸಂಗಯ್ಯನವರ ದಿವ್ಯಪಾದಕ್ಕಾಗಿ ಪೇಳಿದ ಕಲಿಯುಗ ಪ್ರಮಾಣವೆಷ್ಟೆಂದರೆ, 4,32,000 ವರ್ಷಗಳು ಶ್ರೀ ಬಸವರಾಜ ದೇವರು ಕಲ್ಯಾಣಕ್ಕೆ ಬಂದದ್ದು ಅಲ್ಲಿ ಕಲಿ ವರ್ಷಗಳು ಶ್ರೀ ಕೈಲಾಸಕ್ಕೆ ದಯಮಾಡಿಸಿದ್ದು 3192 ನೇ ರಾಕ್ಷಸ ಸಂವತ್ಸರದ ಫಾಲ್ಗುಣ ಶುದ್ಧ 12 ಸೋಮವಾರ 28 ಘಳಿಗೆಯ ಮೇಲೆ ಹೊರಟು ಹೋದರು, ಅಡಪದ ಅಪ್ಪಣ್ಣಾವರು ಕಪ್ಪಡಿ ಸಂಗಮೇಶ್ವರನಲ್ಲಿ ಐಕ್ಯವಾದರು. ನಳನಾಮ ಸಂ || ವೈಶಾಖ ಬಹುಳ 2 ಮಂಗಳವಾರ ರೋಹಿಣೀ ನಕ್ಷತ್ರದಲ್ಲಿ 770

ಮಂದಿ ಅಮರಗಣಂಗಳು, 60 ಮಂದಿ ಪುರಾತನರೂ, 12,000 ಜಂಗಮರೂ ಸಹಿತ ಬಿಜ್ಜಳನ ವಧೆಯನ್ನು ಮಾಡಿಸಿ ಉಳುವಿಗೆ ದಯಮಾಡಿಸಿದರು. ಹಿಂದಕ್ಕೆ 10 ಮುಂದಕ್ಕೆ 11 ಸಂದ ಆನಂದನಾಮ ಸಂವತ್ಸರದಲ್ಲಿ ವೀರವಸಂತರಾಯನು ಹುಟ್ಟುವನು. ಸತ್ಯ, ನಿಮ್ಮಾಣೆ ನಿಮ್ಮ ಪುರಾತನರ ಪಾದದಾಣೆ.

ಕೀಲಕನಾಮ ಸಂವತ್ಸರದಲ್ಲಿ ಕಿರೀಟ ರಾಮರಾಜನು ಬೇಲಿಗೆ ಬಿದ್ದಾನು. ಚಂದಿರನ ಮೇಲೆ ಚುಕ್ಕೆ ಎಂದು ಕೂಡುತ್ತದೆಂದರೆ ವಿರೋಧಿನಾಮ ಸಂವತ್ಸರದ ಫಾಲ್ಗುಣ ಶುದ್ಧ 13 ಭಾನುವಾರ ಚುಕ್ಕೆ ಕೂತದ್ದೇ ಕುರುಹು.

ಹೊನ್ನಿಗೆ ಓಮ್ಮಾನ ಧ್ಯಾನ ಯಾವಾಗ ಮಾಡುವುದೆಂದರೆ ಪರೀಧಾವಿ ಸಂವತ್ಸರದ ಚೈತ್ರ ಶುದ್ಧ ಮೊದಲ್ಗೊಂಡು 6 ತಿಂಗಳು ಕಲ್ಯಾಣಪುರದಲ್ಲಿ ಕಚ್ಚಾ ಸೇರು ಮಾನದಲ್ಲಿ 18 ದಿನಸಿನ ಧಾನ್ಯವನ್ನು ಮಾರಿದ್ದೇ ಕುರುಹು. 4 ಕೋಟಿ 42 ಲಕ್ಷ 28 ಸಾವಿರ ಪ್ರಜೆಗಳು ಅನ್ನವನ್ನು ಕಾಣದೆ ಲಯವಾಗಬೇಕು. ಭೂಮಿಯು ಯಾವಾಗ ಗುಡುಗಬೇಕೆಂದರೆ ಪರೀಧಾವಿ ಸಂವತ್ಸವರದ ಜ್ಯೇಷ್ಠ ಶುದ್ಧ ಮಂಗಳ ವಾರ 11 ಘಳಿಗೆ ಪುಬ್ಬಾ ನಕ್ಷತ್ರದಲ್ಲಿ ಗುಡುಗಿದ್ದೆ ಕುರುಹು.

ಆನಂದನಾಮ ಸಂವತ್ಸರದ ಕಾರ್ತೀಕ ಶುದ್ಧ 1 ಶುಕ್ರವಾರ ಸ್ವಾತಿ ನಕ್ಷತ್ರ ದಲ್ಲಿ 18 ಘಳಿಗೆಯ ಮೇಲೆ ಹುಟ್ಟುವನು. ಸತ್ಯ ದೇವಕಿ ದೇವಿಯ ಗರ್ಭದಲ್ಲಿ ಹುಟ್ಟು ವನು. ಕ್ಷತ್ರಿಯ ವಂಶದಲ್ಲಿ ವೀರವಸಂತರಾಯನು ಇರುವ ಕುರುಹು ಹೇಗೆಂದರೆ, ಡಮರುಗ ಹಸ್ತವೂ, ಉರ್ಧ್ವ-ರೋಮವೂ, ಹಸುರು ನರಗಳು ಹಣೆಯ ಮೇಲೆ ಎದ್ದಿರಬೇಕು. ಎಡಕುಂಟನು ಆಜ್ಞೆಯಲ್ಲಿ 12 ವರ್ಷ ಇರಬೇಕು. ಆತನು ಹುಟ್ಟಿದ ಕುರುಹಿಗೆ ಬಿದುರು ಕೋಟಿಯಲ್ಲಿ 9 ಲಕ್ಷ ದಂಡು ನುಡಿಯಬೇಕು. ಅದು ಯಾವಾ ಗೆಂದರೆ, ಆನಂದನಾಮ ಸಂವತ್ಸರದ ಫಾಲ್ಗುಣ ಶುದ್ಧ 15 ದಿವಸ ರಕ್ತ ಕಾಲುವೆ ಹರಿಯಬೇಕು. ರಾಕ್ಷಸನಾಮ ಸಂವತ್ಸರದಲ್ಲಿ ಅರಸು, ದೇಶಾಧಿಪತಿಗಳು ಆಳು ವರು. ನಳನಾಮ ಸಂವತ್ಸರದಲ್ಲಿ 3 ಗ್ರಹಣದ ಫಲವು ಜರುಗಬೇಕು. ಕಾಳೇಶ್ವರ ನಲ್ಲಿ 10 ಘಳಿಗೆ ರಾಜ್ಯ ಹೋದದ್ದೇ ಸಾಕ್ಷಿ ಪಿಂಗಳನಾಮ ಸಂವತ್ಸರದ ಆಶ್ವೀಜ ಶುದ್ಧ 15 ದಿನದಲ್ಲಿ ಆಕಾಶ ವದರಿದ್ದೇ ಸಾಕ್ಷಿ.

ಕಾಳಯುಕ್ತಿನಾಮ ಸಂವತ್ಸರದ ಆಷಾಡ ಶುದ್ಧ 5 ಭಾನುವಾರ ಪುಷ್ಯ ಮಾಸ ಮಖಾ ನಕ್ಷತ್ರದಲ್ಲಿ ಈಶಾನ್ಯ ದಿಕ್ಕಿನಿಂದ ಪಶ್ಚಿಮ ದಿಕ್ಕಿಗೆ ಹಾರ್‍ಯಾಳು. ನಾಲ್ಕು ದಿಕ್ಕಿನಲ್ಲಿ ನಾಲ್ಕು ಮೂರು ತಿಂಗಳು ಇದ್ದಾಳು. 88 ಲಕ್ಷ 25 ಸಾವಿರ ಪ್ರಜೆಗಳು ಲಯವಾಗಬೇಕು. ಹಂಪೇ ಸ್ಥಳದಲ್ಲಿ 18 ಲಕ್ಷ ಮಾರ್ಬಲವು ಕೂಡಿತು. ಅಲ್ಲಿ ರಾಯರಿಗೆ ಜಗಳವಾದುವು. ಅಲ್ಲಿ ಯಾರ್‍ಯಾರು ಕೂಡಬೇ ಕೆಂದರೆ ಅಶ್ವಪತಿ, ಗಜಪತಿ, ನರಪತಿ, ಪರಂಗಿ ತಾಮ್ರದ ಮೋರೆಯವರು, ಕಿರೀಟ ರಾಮರಾಯನು ಡಿಲ್ಲಿ ಸುಲ್ತಾನನು ಪಾವನ್ನ, ದಶನ್ನ, ಬುವನ್ನ,

ಗಡ್ಡಡವರು, 77 ಮಂದಿ ಪಾಳೇಗಾರರು ಸಹ ಸೇರಬೇಕು. ಕಾಶೀ ಕಡೆಯಿಂದ ಹರೇದ ಹೆಣ್ಣು ಮಗಳು ಮಡಲಿಂಗನ ತೆಗೆದುಕೊಂಡ ಬರುವಳು. ಬಿದುರುಕೋಟಿ ಕಲ್ಲುಗಳು ಒಲೆ ಗುಂಡಿಗೆ ಸಾಲದೇ ಹೋಗುವುದು. ವಿರೂಪಾಕ್ಷ ದೇವರ ಬಳಿಯಲ್ಲಿ 18 ಲಕ್ಷ ದಂಡು ಜಮಾ ಆಗುವುದೇ ಕುರುಹು. ಅಲ್ಲಿ ರಕ್ತದ ಕಾಲುವೆ ಹರಿಯ ಬೇಕು. 12 ಖಂಡ-ಗದ ಒಳಿಗಳು ಒಡೆದೀತು. ಇದು ಯಾವಾಗೆಂದರೆ, ಸಿದ್ಧಾರ್ಥಿ ನಾಮ ಸಂವತ್ಸರದ ಫಾಲ್ಗುಣ ಶುದ್ಧ 3 ದಿನಗಳಲ್ಲಿ ವಾಲೀ ಭಂಡ ರದ ದ್ರವ್ಯವನ್ನು ತೆಗೆಯಬೇಕೆಂದು ಬಂದಾರು. ಚಾಳೇಂದ್ರ ಪರ್ವತದೊಳಗಿನಿಂದ ಜ್ಞಾನಗುಣಮಣ ಎಂಬ ಋಷೀಶ್ವರರು ಹೊರಟು ಬಂದು ನರಮಾನ್ಯರಿಗೆ ಸಾಧ್ಯವಾಗಲಾರದೆಂದು ಹೇಳಿದಾಗ್ಯೂ ಅವರ ಮಾತನ್ನು ಕೇಳದೆ ವಾಲಿಭಂಡಾರಕ್ಕೆ ಆಹುತಿ ಕೊಟ್ಟರು. ಅವರು ಅದೃಶ್ಯರಾಗಿ ಹೋಗುವರು.

25 ಖಂಡುಗ ಅನ್ನ ಆಹುತಿ, ಮೂರು ಖಂಡುಗ ಎಣ್ಣೇ ದೀಪವು 25 ಮಣ ಅರಸಿನವು, 25 ಮಣ ಮೆಣಸು, ಎಷ್ಟು ಕೊಟ್ಟಾಗ್ಯೂ ಅದು ಸಾಧ್ಯವಾಗುವುದು.

ಇವರು ಎಷ್ಟು ಹಿಂಬಲವಾಗಿ ಹೋದರೂ ಅಲ್ಲಿ ಅದೃಶ್ಯವಾಗಿರುವಳು. ಅಲ್ಲಿಂದ ಶ್ರೀ ಮಲ್ಲಿಕಾರ್ಜುನನ ಗುಡಿಗೆ ಹೋಗುವಳು. ಮುಸಲ್ಮಾನರು ಬಿಡುವು ದಿಲ್ಲವೆಂದು ಮೂರು ದಿವಸ ಮುತ್ತಿಗೆ ಹಾಕುವರು. ಶ್ರೀ ಮಲ್ಲಿಕಾರ್ಜುನ ದೇವರು ಬಂದು ಅವರ ಸ್ವಪ್ನದಲ್ಲಿ ಹೇಳಿದಾಗ್ಯು ಅವರು ಬಿಡುವುದಿಲ್ಲವೆಂದು ಪೇಳಲು, ಆ ಲಕ್ಷ್ಮೀದೇವಿಯು ಪರ್ವತಗಿರಿಯನ್ನು ಬಿಟ್ಟು ಗೋಲ್ಗಿರಿಗೆ ಹೋಗಿ ಸೇರುವಳು. ಅದರ ದೆಸೆಯಿಂದ ಶ್ರೀ ಮಲ್ಲಿಕಾರ್ಜುನ ದೇವರನ್ನು ಕಿತ್ತುಹಾಕಿದ ಬಳಿಕ—

ಅಲ್ಲಿ ಮುಸಲ್ಮಾನರು ಮಸೀದಿ ಕಟ್ಟುವರು. ರೌದ್ರಿನಾಮ ಸಂವತ್ಸರದ ಚೈತ್ರ ಶುದ್ಧ 2 ಭಾನುವಾರ ರೋಹಿಣಿ ನಕ್ಷತ್ರದಲ್ಲಿ ಆದದ್ದೇ ಕುರುಹು. ಭಂಗಾರದ ಅಮೂಲ್ಯವಾದ ಬಸವೇಶ್ವರನ ಕರ್ಣದಲ್ಲಿ ತೊಟ್ಟಿಲ ಬಳಿ ಒಂದೇ ದಿವಸದಲ್ಲಿ ಗುಡಿಯ ಸುತ್ತಾ ಹಬ್ಬಿಕೊಂಡು ಅಲ್ಲಿ ಒಂದು ಆರ್ಭಟವಾದ ಕೂಗು ಹುಟ್ಟಿ ಅದರಿಂದ ಅರ್ಧ ದಂಡು ಲಯವಾದೀತು. ಅಲ್ಲಿಂದ ವೆಂಕಟರಮಣನಲ್ಲಿಗೆ ಹೋದಿತು.

ಸರ್ಪಭೂಷಣನ ಬೆಟ್ಟದೊಳಗಿನಿಂದ 7 ಗಜದುದ್ದ ಕರೀಹುಲಿ ಬಂದು ಸೇರಿತು ಅಲ್ಲಿಂದ ವೆಂಕಟರಮಣ ತಿಮ್ಮಪ್ಪನ ನಾಭಿಕಮಲದಲ್ಲಿದ್ದ ರತ್ನವನ್ನು ತೆಗೆಯಬೇಕೆಂದು ಹೋದಾರು. ಆ ವೆಂಕಟೇಶನು ಕೊಲ್ಲಿಪಾಕಿ ಸೋಮನಾರಾಧ್ಯರ ಬಳಿಗೆ ಬಂದಾರು. ಮುಸಲಮಾನರು ಆ ಗಿರಿಯಿಂ ಏರಲಿಕ್ಕಾಗಿ ಬಂದಾರು. ರೌದ್ರಿನಾಮ ಸಂವತ್ಸರದ ಜ್ಯೇಷ್ಠ ಶುದ್ಧ ಗುರುವಾರ ಒಂದು ಘಳಿಗೆಗೆ ಕೋಟಿ ದ್ರವ್ಯವು ಇದ್ದಲಾದ್ದೀತು. ಶಿಲಾಮೂರ್ತಿ ಅದೃಶ್ಯವಾದೀತು.

ಬ್ರಹ್ಮದೇವರಿಟ್ಟ ದೀವಿಗೆ ಅದೃಶ್ಯವಾಗುವುದು. ಅಲ್ಲಿಂದ ಅಳಿಯಪುರಕ್ಕೆ ಬಂದಾರು ಮಾತಾಂಗ ಪರ್ವತದ ಬಳಿಯಲ್ಲಿ ಮಸೀದಿ ಕಟ್ಟಾರು. ಆ ಪರ್ವತದ ಮೇಲೆ ಗುಮ್ಮಗೆ ಅಳಿದಾರು. ಇದು ಯಾವಾಗೆಂದರೆ, ರಾದ್ರಿನಾಮ ಸಂವತ್ಸರದ ಶ್ರಾವಣ ಬಹುಳ 4 ಮಂಗಳವಾರ ರೋಹಿಣಿ ನಕ್ಷತ್ರದಲ್ಲಿ 5 ಘಳಿಗೆಯ ಮೇಲೆ ವಿರೂಪಾಕ್ಷನ ಪೂಜೆಯು ನಿಂತು ಹೋಯಿತು.

ಮಂಗಹರಿಣ, ಮುಂಗಸಿ, ನೊಲ, ನಾಯಿ, ಬೆಕ್ಕು, ಇಲಿ ಈ ಆರು ಬಲಕೆ ಬಂದರೆ ಶುಭವಾಗುವುದು. ಗಾಣಿಗರು, ಜೋಳಿಹಾರವಗಿತ್ತಿ, ಒಂಟಿ ಬ್ರಾಹ್ಮಣನು ಕಾಷ್ಟ ಇವು ಎದುರಾಗಿ ಬಂದರೆ ಅಶುಭವಾದೀತು. ಜೋಡಿ ಮುತ್ತೈದೆಯರು ತುಂಬಿದ ಕೊಡವನ್ನು ಎತ್ತಿಕೊಂಡು ಬಂದರೆ ಲಕ್ಷಣವಾದೀತು. ಪಂಚಾಯಿತಿ ಗಳಲ್ಲಿಯೂ ನ್ಯಾಯ ಕೆಟ್ಟದ್ದಾಗುವುದು. ಕೆಟ್ಟದ್ದು ಒಳ್ಳೆಯದಾಗುವುದು.

ಕಲ್ಯಾಣಪುರ ಪ್ರಾಂತ್ಯದಲ್ಲಿ ಇರುವ ಬಾಲಕಿ ಎಂಬ ಪಟ್ಟಣದೊಳಗೆ ಶಿವ ಭಕ್ತಿ ಬಸೆಟ್ಟಿಯೆಂಬುವನ ಮಗ ಲಿಂಗಸೆಟ್ಟಿ ಎಂಬುವನು ತಂದೆಯನ್ನು ಕೊಂದು ತಾಯಿಯ ಸಂಗಡ ಭೋಗವನ್ನು ಮಾಡುತ್ತಾ ಆಲ್ಲಿ ಈ ಮೇರೆ ಕಾರುಬಾರು ಮಾಡಿದ್ದೇ ಕುರುಹು. ಇದು ಯಾವಾಗೆಂದರೆ, ದುರ್ಮುಖಿನಾಮ ಸಂವತ್ಸರದ ಶ್ರಾವಣ ಬಹುಳ 5 ಸೋಮವಾರ ಅರಂಭಮಾಡಿಕೊಂಡು ಒಂದು ತಿಂಗಳು ಮತ್ತೊಂದು ತಿಂಗಳಲ್ಲಿ ನಡೆಯುವುದು. ಒಬ್ಬ ಪುರುಷನಿಗೆ 9 ಮಂದಿ ಸ್ತ್ರೀಯರು ಬೆಂಬಲಬಿದ್ದು ಹೋಗುವರು. ಅವನು ಬೇಸತ್ತು ಮರವನ್ನೇರಿಕೊಂಡರೂ ಬಿಡರು. ಈ ಮೇರೆ ಸ್ತ್ರೀಯರುಗಳ ಉಪದ್ರವವು ಅತಿಶಯವಾಗಿ ಹೆಚ್ಚುವುದು. ಚಂದಾದಿತ್ಯರು ಮೂರು ದಿವಸದ ವರೆಗೆ ಅಡಗ್ಯಾರು. ಎಲ್ಲಿ ನೋಡಿದರೂ ಕಾರ್ಗತ್ತಲೆ ಆದೀತು. ಇದು ಎಂದು ಅಂದರೆ, ದುರ್ಮುಖಿನಾಮ ಸಂವತ್ಸರದ ಮಾರ್ಗಶಿರ ಬಹುಳ 5 ಸೋಮವಾರ ಉತ್ತರಾಷಾಢ ನಕ್ಷತ್ರದಲ್ಲಿ ಆಗುವುದು. ಭೂತಗಳು ಘನವಾದೀತು. ಮಿಡತೆ ದಂಡು ಹೆಚ್ಚುವುದು. ರಾಯಚೂರು ಎಂಬ ಪಟ್ಟಣದ ಸುತ್ತಲೂ ಕತ್ತಲೆ ಕವಿದೀತು.

ಮದುವೆಗಳು ಮಾಡುವರ ಬಟ್ಟೆಗಳಿಗೆ 12 ಟಂಕೆಗೆ 1 ಬೀಳಿಸೀರಿ ಆಗುವುದು. ರೂಪಾಯಿಗೆ ಸವಾಸೇರು ಎಣ್ಣೆ ಮಾರುವುದು. ಇದು ಯಾವಾಗೆಂದರೆ ದುರ್ಮುಖಿ ನಾಮ ಸಂವತ್ಸರದ ಪುಷ್ಯ ಮಾಸದಲ್ಲಿ ಆಗಬೇಕು.

ಇದು ಯಾವಾಗೆಂದರೆ, ದುರ್ಮುಖಿನಾಮ ಸಂವತ್ಸರದಲ್ಲಿ ಕಲ್ಯಾಣದ ಪಟ್ಟಣದಾಚೆ 360 ಗಾವುದ ದೂರದಲ್ಲಿ ಶ್ರೀರಾಮಪುರದ ಶಿವಬ್ರಾಹ್ಮಣನ ಹೊಟ್ಟೆಯಲ್ಲಿ ಒಂದು ಹೆಣ್ಣು ಕೂಸು ಹುಟ್ಟುವುದು. ಆಕೆ ಗಂಡನಿಲ್ಲದೆ ಏಳು ವರ್ಷದಲ್ಲೇ ಗರ್ಭಿಣಿಯಾಗಿ ಒಂಬತ್ತು ಮಕ್ಕಳನ್ನು ಹಡೆದಾಳು. ಅದರೊಳಗೆ ಎಂಟು ಮಕ್ಕಳು ಹೋದಾವು, ಒಂದು ಕೂಸು ಹಿಂದೆ ಆದದ್ದು ಮುಂದೆ ವೀರ

ಬಸವರಾಜ ದೇವರು ಬರುವಂಥಾ ಕುರುಹನ್ನು ಹೇಳಿ
ವಸಂತರಾಯನು ಚೆನ್ನ ಬಸವರಾಜ ದೇವರು ಬರುವಂಥಾ ಕುರುಹನ್ನು ಹೇಳಿ
ವಸಂತರಾಯನು ಚನ್ನ ಬಸವರಾಜ ಶ್ರಾವಣ ಬಹುಳ 8 ಗುರುವಾರದಲ್ಲಿ ಅದು
ದುಂದುಭಿನಾಮ ಸಂವತ್ಸರದ ಶ್ರಾವಣ ಬಹುಳ 8 ಗುರುವಾರದಲ್ಲಿ ಅದು



ವಸಂತರಾಯನು ಚನ್ನ ಬಸವರಾಜ ದೇವರು ಬರುವಂಥಾ ಕುರುಹನ್ನು ಹೇಳಿ ದುಂದುಭಿನಾಮ ಸಂವತ್ಸರದ ಶ್ರಾವಣ ಬಹುಳ 8 ಗುರುವಾರದಲ್ಲಿ ಅದು ಲಯವಾಗುವುದು. ಯಾವಾಗೆಂದರೆ, ದುಂದುಭಿನಾಮ ಸಂವತ್ಸರದ ಮಾಘ ಶುದ್ಧ 15 ಮಂಗಳವಾರ ದಿವಸ 3 ಘಳಿಗೆಗೆ ಸೂರ್ಯಗ್ರಹಣ ಹಿಡಿದು 5 ಘಳಿಗೆಗೆ ಬಿಟ್ಟೀತು.

ಇದು ಯಾವಾಗೆಂದರೆ, ರುದಿರೋದ್ಗಾರಿನಾಮ ಸಂವತ್ಸರದ ಆಶ್ವೀಜ ಶುದ್ಧ 9 ಭಾನುವಾರ ಶ್ರವಣ ನಕ್ಷತ್ರದಲ್ಲಿ 28 ಘಳಿಗೆಯ ಮೇಲೆ ಸಿಹಿ ವಿಷವಾಗುವುದು. ವಿಷ ಸಿಹಿಯಾಗುವುದು.

ಇದು ಯಾವಾಗೆಂದರೆ, ರುಧಿರೋದ್ಗಾರಿ ಸಂವತ್ಸರದ ಆಶ್ವೀಜ ಬಹುಳ 14 ಶನಿವಾರ ಧನಿಷ್ಟಾ ನಕ್ಷತ್ರದಲ್ಲಿ 3 ಘಳಿಗೆಯ ಮೇಲೆ ಕೆಂಡದ ಮಳೆ ಮೂರು ಗಾವುದ ಸುತ್ತಲೂ ಸುರಿದೀತು. ಇದು ಆಶ್ವೀಜ ಬಹುಳ 13 ಭಾನುವಾರ ಶತಭಿಷಾ ನಕ್ಷತ್ರದಲ್ಲಿ 4 ಘಳಿಗೆಯ ಮೇಲೆ ಗುಂಡುಗಳು ತೇಲೀತು, ಬೆಂಡುಗಳು ಮುಳುಗೀತು. ಬೇಡು ಎಂದು ಮುಳುಗಬೇಕೆಂದರೆ ಇದೇ ಆಶ್ವೀಜ ಬಹುಳ 14 ಸೋಮವಾರ ಉತ್ತರ ಭಾದ್ರ ನಕ್ಷತ್ರದಲ್ಲಿ 7॥ ಘಳಗೆ ಮೇಲೆ ಮಜ್ಜಿಗೆಯೊಳಗಿನ ಬೆಣ್ಣೆ ಮುಳುಗಬೇಕು. ಇದೇ ಆಶ್ವೀಜ ಬಹುಳ ಮಂಗಳವಾರ ಸಂಪೂರ್ಣವಾಗಿ ತೇಲಬೇಕು.

ಶಿಖೇಂದ್ರ ಪಾಶ್ಚಾನ ಠಾಣ್ಯವು ಎಂದು ಬೀಳಬೇಕೆಂದರೆ ರಕ್ತಾಕ್ಷಿನಾಮ ಸಂವತ್ಸರದ ಆಷಾಢ ಶುದ್ಧ 5 ಸೋಮವಾರ ಪುಬ್ಬಾ ನಕ್ಷತ್ರದಲ್ಲಿ 6॥ ಘಳಿಗ್ಯೆ ಬಂದು ಬೀಜಾಪುರದ ತಖ್ತೆ ಏರುವನು. ಮೂರು ತಿಂಗಳ ರಾಜ್ಯವನ್ನು ಆಳುವನು. ಅಲ್ಲಿಗೆ ಕಿರೀಟ ರಾಮರಾಜನು 9 ಲಕ್ಷ ದಂಡು ತೆಗೆದುಕೊಂಡು ಶಿಖೇಂದ್ರಪಾಶ್ಚನು ಆನೆ ಮೇಲೆ ಕುಳಿತುಕೊಂಡು ಹೊರಹೊರಟು ಬಂದು ಅರ್ಧ ದಂಡು ಲಯಮಾಡುವನು. ಆನೆ ಏರಿ ಬರುವ ಶಿಖೇಂದ್ರಪಾಶ್ಚನ ಮೇಲೆ ಕಿರೀಟ ರಾಮರಾಜನು ಚಂದ್ರಾಯುಧದಿಂದ ಅವನ ತಲೆಯನ್ನು ಹೊಡೆಯುವನು. ಈತನ ತಲೆಯು ಅಂತರಿಕ್ಷಕ್ಕೆ ಹಾರಿ ಛೋಯೆಂದು ಕೂಗುವುದು. ಕಿರೀಟ ರಾಮರಾಜನ ಸೈನ್ಯದಲ್ಲಿ 9000 ಜನಗಳು ಮಡಿದುಹೋಗುವರು. ಇದು ಯಾವಾಗೆಂದರೆ, ರಕ್ತಾಕ್ಷಿನಾಮ ಸಂವತ್ಸರದ ಭಾದ್ರಪದ ಶುದ್ಧ 8 ಶುಕ್ರವಾರ 7 ಘಳಿಗೆಯ ಮೇಲೆ ಆತನ ತಲೆಯನ್ನು ಆನೆ ಅಂಬಾರಿಯೊಳಗೆ ಮೆರೆಸಿಕೊಳ್ಳುತ್ತಾ ಬಂದು ಸಿಂಹಾಸನದ ಮೇಲೆ ಇಟ್ಟು ಗೋರಿಯನ್ನು ಕಟ್ಟಿಸಿ, 83 ಬಂಗಾರದ ಕಲಶಗಳನ್ನು ಇಟ್ಟು ಗುಮ್ಮಟಿಯನ್ನು ಕಟ್ಟಿಸುವರು. ಆ ಗೋರಿಯ ಮೇಲೆ ಕೈಲಾಸದಿಂದ ಮಲ್ಲಿಗೆ ಹೂವಿನ ಮಳೆಗರೆಯುವುದು. ಕೊರಡು ಚಿಗರೀತು ಬರಡು ಹಯನಾದೀತು. ಬಂದೇ ದೇವರಾಗಿಯು ಪೂಜೆಯನ್ನು ಕೊಳ್ಳುವುದು.

ಕಲ್ಲು ಬುರುಗೆಯಲ್ಲಿ ದೇವರ ಪೂಜೆಯು ಮಧ್ಯಾಹ್ನ ನಿಂತುಹೋದೀತು. ಆಮೇಲಿ
ಶಿಖೇಂದ್ರಪಾಶ್ಚಾನ ಗೋರಿಯ ಪೂಜೆ ನಿಂತೀತು ಈ ಮರ್ಯಾದೆಯೆಲ್ಲ ಆದೀತು.
ಆಮೇಲೆ ನಮ್ಮ ಗಣಂಗಳು ಹೋಟು ಬಂದಾರು ಕ್ರೋಧನನಾಮ ಸಂವತ್ಸರದಲ್ಲಿ
ಏನೇನು ಆಗುವುದೆಂದರೆ ಅಂಗೈಯೊಳಗೆ ಕಣ್ಣುಗಳಿರುವವರು ಬರುತ್ತಾರೆ.
ತಲೆಮೇಲಿ ಕೊಡಗಳು ಮೂಡಿದರೂ, ಐದುಮುಖ ಹತ್ತು ಭುಜಗಳು ಇದ್ದವರೂ
ಸಹ ಬಂದಾರು. ಜಲಸ್ತಂಭನ, ದೂರದೃಷ್ಟಿ, ದೂರಶ್ರವಣ, ಈ ಪ್ರಕಾರದಿಂದ
ಬಂದಾಗ್ಯೂ ಅವರನ್ನು ನಂಬಲಾಗದು ಕ್ರೋಧನನಾಮ ಸಂವತ್ಸರದಲ್ಲಿ ಶ್ರೀ
ಬಸವೇಶ್ವರ ದೇವರು ಬಂದಾರು ವೀರವಸಂತರಾಯನು ಬರುತ್ತಾನೆಂದು
ಹೇಳಿದಾಗ್ಯೂ ಒಂದು ಕಾಲಕ್ಕೂ ನಂಬಲಾಗದು. ಅವರು ಬರುವಂತ ಸೂಚನೆ
ಎಂದು ಬರುವುದೆಂದರೆ, ಅಕ್ಷಯನಾಮ ಸಂವತ್ಸರದ ಚೈತ್ರ ಶುದ್ಧ ೧ ಶುಕ್ರವಾರ
ರೇವತಿ ನಕ್ಷತ್ರದಲ್ಲಿ ವಿರೂಪಾಕ್ಷೇಶ್ವರನು ಹೇಮಕೂಟದ ಮಠಕ್ಕೆ ಬಂದಾನು.
ಶ್ರೀವೈಷ್ಣವರು 500 ಮಂದಿ ಸೊನ್ನಲಾಪುರದ ಸಿದ್ಧರಾಮೇಶ್ವರನ ಕೆರೆಯೊಳಗೆ
ಬಿಳಿ, ಆನೆಯು ಹುಟ್ಟಿ ಬಯಲಿಗೆ ಹೊರಟೀತು. ಆ ಆನೆಯನ್ನು ತೆಗೆದುಕೊಂಡು
ಬಂದು ವೀರ ವಸಂತರಾಯನಿಗೆ ಕೊಟ್ಟಾರು. ಆ ವೀರವಸಂತರಾಯನು ಆನೆಯನ್ನು
ತೆಗೆದುಕೊಂಡು ಏನುಮಾಡಬೇಕೆಂದು ಕೇಳುವನು.

ಹಸರು ತೇಜಿಯನ್ನೇರಿ ತ್ರಿಜಗದೊಲ್ಲಭನಾದಂಥ ಚನ್ನಬಸವೇಶ್ವರ
ದೇವರು ಸತ್ಯಬೀಜವನ್ನು ಹುಡುಕುತ್ತಾ ಬರುತ್ತಾರೆ. ಸಣ್ಣವಾಜಿಯುಳ್ಳವನಿಗೆ
ಪಟ್ಟವನ್ನು ಕಟ್ಟುವರು. ಮೂಜಗವೂ ಕೆಟ್ಟುಬಂದೀತು. ಶ್ರೀಚನ್ನಬಸವೇಶ್ವರ
ದೇವರು ಬರುವುದಾವಾಗೆಂದರೆ ಅಕ್ಷಯನಾಮ ಸಂವತ್ಸರದ ಕಾರ್ತೀಕ ಶುದ್ಧ 9
ಶುಕ್ರವಾರ ಸ್ವಾತೀ ನಕ್ಷತ್ರದಲ್ಲಿ 18 ಘಳಿಗೆಯ ಮೇಲೆ ಹಸರು ತೇಜಿಯಮೇಲೆ
ಕುಳಿತುಕೊಂಡು 770 ಮಂದಿ ಅಮರಗಣಂಗಳು 60 ಮಂದಿ ಪುರಾತನರನ್ನೂ,
12,000 ಜಂಗಮರ ಸಮೂಹವನ್ನೂ ಹಿಂದಿಟ್ಟುಕೊಂಡು ಬರುವರು. ಅವರಿ
ರುವ ರೂಪು ಎಂಥಾದ್ದೆಂದರೆ, ಡಮರುಗ ಹಸ್ತದಲ್ಲಿ ಹಿಡಿದಿರಬೇಕು, ಕರೇ
ಕಂಬಳಿ ಕಂತೆಯನ್ನೂ ಕಾಮನ ಭಸ್ಮವನ್ನೂ, ಪರಿಪೂರ್ಣವಾದ ಪರಮ
ರುದ್ರಾಕ್ಷಿಯನ್ನೂ, ಪರುಶು ಕೊಡಲಿಯ ಪೂಜೆಯನ್ನೂ, ಬೆರಳಿನಲ್ಲಿ ವೃಷಭನ
ಮುದ್ರೆಯನ್ನೂ, ನಾಗಬೆತ್ತವನ್ನು ಕೈಯಲ್ಲಿ ಹಿಡಿದುಕೊಂಡು ಮುತ್ತಿನ ಹಾವುಗೆ
ಮೆಟ್ಟಿಕೊಂಡು ಪರಮಾತ್ಮನಾದ ಶ್ರೀಚನ್ನಬಸವೇಶ್ವರ ದೇವರು ಬರುತ್ತಾ ವ್ಯಾಸ
ರಲ್ಲಿ ಪೂಜೆಯನ್ನು ತೆಗೆದುಕೊಂಡು ಶ್ರೀ ನಂದೀಶ್ವರನ ಬೆಟ್ಟಕ್ಕೆ ಬಂದು ಆ
ನಂದೀಶ್ವರನ ದರ್ಶನಮಾಡಿಕೊಂಡು. 12,000 ಜಂಗಮಾರ್ಚನೆ ಮಾಡಿಸಿ
ಅಲ್ಲಿಂದ ವಿರೂಪಾಕ್ಷೇಶ್ವರನ ಬಳಿಗೆ ಬಂದು ಪಂಪಾಪುರವನ್ನು ಹೊಕ್ಕು ವೀರ

ವಸಂತರಾಯರ ಸಂಗಡ ಪ್ರಸಂಗವನ್ನು ಮಾಡುವರು. ಶಿವಾಚಾರವನ್ನು ಕೆಡಿಸಿ ವಿಷ್ಣು ಪರವನ್ನು ಏನು ಕಾರಣ ಮಾಡಿದಿರೆಂದು ಕೇಳುವಲ್ಲಿ, ಅದಕ್ಕೆ ವೀರವಸಂತ ರಾಯನು ಹೇಳುವುದೇನೆಂದರೆ ವಿಷ್ಣು ಪಾದದಲ್ಲಿ ಗಂಗೆ ಹುಟ್ಟಿದಳೆಂದು ಹೇಳು ವನು. ಅದಕ್ಕೆ ಶ್ರೀ ಚನ್ನಬಸವೇಶ್ವರ ದೇವರು 20 ಯುಗಗಳಲ್ಲಿ ಮಾಯೆಯು ಹುಟ್ಟಿದಳೆಂದು ಹೇಳುವರು. ಇದಕ್ಕೆ ವೀರವಸಂತರಾಯನು ಕಲಿಯುಗದಲ್ಲಿ ವಿಷ್ಣು ಹುಟ್ಟಿದನೆಂದು ಹೇಳುವನು. 28ನೇ ಅವತಾರ ಈಶ್ವರನು ಹುಟ್ಟಿದ ನೆಂದು ಇವರು ಹೇಳುವರು. ಹೀಗೆ ಇವರು ವಾದಿಸುತ್ತಿರಲು, ಅಲ್ಲಿಗೆ ವಿರೂಪಕ್ಷೇಶ್ವರ ದೇವರು ಜಂಗಮ ರೂಪಿನಿಂದ ಬಂದು ನೀವು ನೀವು ವಾದಿಸತಕ್ಕ ಕೆಲಸ ವಿಲ್ಲ. ಪಾತಾಳ ಗಂಗೆಯನ್ನು ಯಾರು ಬತ್ತಿಸುತ್ತಾರೋ ಅವರೇ ಗುರುವಾಗಿ ಬನ್ನಿಯೆಂದು ಹೇಳುವರು. ಅಲ್ಲಿಂದ ವಿರೂಪಾಕ್ಷೇಶ್ವರನ ಸ್ಥಳವನು ಬಿಟ್ಟು ಪಾತಾಳ ಗಂಗೆಯ ಸಮೀಪಕ್ಕೆ ಹೋಗುವರು. ಇದು ಯಾವಾಗೆಂದರೆ, ಅಕ್ಷಯ ನಾಮ ಸಂವತ್ಸರದ ಮಾರ್ಗಶಿರ ಶುದ್ಧ 10 ಸೋಮವಾರದ ರಾತ್ರಿ 3 ಘಳಿಗೆಗೆ ಕದಳೀವನಾಂತರದಿಂದ ಪ್ರಭುದೇವರು ಹೊರಟು ಬಂದು ಶ್ರೀ ಚನ್ನಬಸವರಾಜ ದೇವರಿಗೆ ಕ್ರಿಯಾಚಾರ ಪದ್ಧತಿ ಮುಗಿಸಿ ಕೊಟ್ಟು, ಪಾತಾಳ ಗಂಗೆಯೊಳಗೆ ಚನ್ನಬಸವ ದೇವರು ತಮ್ಮ ಪಾದವನ್ನು ಇಡಲಿಕ್ಕಾಗಿ ಮಾರ್ಗಶಿರ ಶುದ್ಧ 11 ಮಂಗಳವಾರ 3 ಘಳಿಗೆಯ ಮೇಲೆ ಕಿರಣವು ಬೀಳುವುದು. ಪಾತಾಳ ಗಂಗೆಯು ಚಂದ್ರಗುಪ್ತ ಮಹಾರಾಜನು ಬೈಲಿಗೆ ಬೀಳುವನು.. 7 ಗಜದ ಉದ್ದ ಕಲ್ಲಿನ ಮೇಲೆ ಶ್ರೀ ಚನ್ನಬಸವೇಶ್ವರ ದೇವರೂ, ಲೋಕಪಾವಮೂರ್ತಿಯಾದ ಬಸವೇಶ ರನೂ ಬಂದು ಚಿಲುಮೆಯನ್ನು ತೆಗೆದು ಆ ಶೀತಳದಲ್ಲಿ ತಮ್ಮ ಪವಾಡವನ್ನು ತೋಳೆಯಲು ಆತನ ಶಾಪವು ನಿಶ್ಯಾಪವಾಗುವುದು. ಆ ಮೇಲೆ ವೀರ ವಸಂತು ರಾಯನಿಗೆ ಭಕ್ತಿ ಹುಟ್ಟುವುದು. ಸಾಷ್ಟಾಂಗ ನಮಸ್ಕಾರ ಮಾಡುವನು 500 ಮಂದಿ ವೈಷ್ಣವರು ಬಂದು ನಮಗೆ ಲಿಂಗಧಾರಣೆ ಮಾಡಬೇಕೆಂದು ಶ್ರೀ ಚನ್ನಬಸವದೇವರನ್ನು ಬೇಡಿಕೊಂಡರು. ಆಗ ವೀರವಸಂತರಾಯನಿಗೆ ಕಂಕಣ ಕಟ್ಟಿ. ಪಂಚ ಚಾಮರವನ್ನು ಕೊಡಿಸಿ, ಏಕಾಂತ ರಾಮಯ್ಯನವರು ಪಂಡಿತರಾಧ್ಯರು, ಲೋಕಪಾವನಮೂರ್ತಿ, ಮರಳು ಶಂಕರ ದೇವರು, ಶ್ರೀ ಸಿದ್ಧ ನಂಜುಂಡೇಶ್ವರದೇವರು, ಈ ಐದು ಮಂದಿ ಪಂಚಾಚಾರದವರನ್ನು ಕೂಡಿಸಿ ದಿಕ್ಷಾನುಗ್ರಹವನ್ನು ಮಾಡುವರು. ಮಾರ್ಗಶಿರ ಶುದ್ಧ 15 ಶನಿವಾರ ರಾತ್ರಿ 28 ಘಳಿಗೆಯ ಮೇಲೆ ಲಿಂಗಾಧಾರಣೆಯಾಗುವುದು. 101 ಜಾತಿಯವರಿಗಿನ್ನು ಆ ಕಾಲದಲ್ಲಿ ಹೊನ್ನು ತೂಕ ವಿಭೂತಿ ಮಾರುವುದು. 5 ವರಹಾಕ್ಕೆ 1 ಲಿಂಗ ಮಾರೀತು. 3 ವರಹಾಕ್ಕೆ ಒಂದು ರುದ್ರಾಕ್ಷಿ ಮಾರುವುದು. ಈ ಪ್ರಕಾರವಾಗಿ ಅಲ್ಲಿಂದ ಕೂಗಿನ ಮಾರಯ್ಯನ ತಂದೆಗಳು ಹುಟ್ಟಿ ಕುಗುತ್ತಾ ಬಂದಾರು.

ಅಲ್ಲಿಂದಾ ಭಕ್ತಿಯು ಪ್ರಭಲವಾಗುವುದು. ಶ್ರೀ ಚನ್ನಬಸವೇಶ್ವರ ದೇವರು ವೀರ
ವಸಂತರಾಯನು ಸಹ ವೆಂಕಟಾಚಲಮೂರ್ತಿಯು ಬೆಟ್ಟಕ್ಕೆ ಬಂದು ಅಲ್ಲಿರುವ
ವೆಂಕಟರಮಣಮೂರ್ತಿಗೆ ಲಿಂಗ ಧಾರಣೆಯನ್ನು ಸ್ಥಾಪ್ಯವನ್ನು ಮಾಡಿ ಲಿಂಗ
ಧಾರಣೆ ಮಾಡುವರು. ಅಲ್ಲಿ 80 ಕೋಟಿ ದ್ರವ್ಯವನ್ನು ತೆಗೆದುಕೊಂಡು ಹಂಪೆಯ
ಸ್ಥಳಕ್ಕೆ ಹೊರಟು ಬಂದು ಹಂಪೆಯ ಸುತ್ತಾ ಕೋಟೆಯನ್ನು ಕಟ್ಟಿಸುವರು. ಅಲ್ಲಿ
ಮಾತಂಗ ಪರ್ವತವನ್ನು ಕಟ್ಟಿಸಿ, ಇಪ್ಪತ್ತೈದುಸಾವಿರ ಜಂಗಮಾರ್ಚನೆಯಂ ಮಾಡಿ
ಸುವರು. ವಿರೂಪಾಕ್ಷದೇವರ ಪೂಜೆ ಮಾಡಿಸಿ ಕಲ್ಲುತೇರು ಎಳೆಸುವರು. ಶ್ರೀ
ಚನ್ನಬಸವರಾಜ ದೇವರು ಒಂದು ಹಸ್ತದಿಂದಲೂ, ವೀರವಸಂತರಾಯನು ಒಂದು
ಹಸ್ತದಿಂದಲೂ ಲೋಕಪಾವನ ಮೂರ್ತಿಯನ್ನು ಮುಹೂರ್ತನ ಮಾಡಿಸ್ಸುವರು.
ರಥೋತ್ಸವನನ್ನು ಮಾಡಿಸಿ ಮಾಲಿಭಂಡಾರಕ್ಕೆ ಬಂದು ಭಂಡಾರದೊಳಗಿನ ಭಾಗ್ಯ
ವನ್ನೆಲ್ಲಾ ತೆಗೆದುಕೊಂಡರು. ಭಂಡಾರದೊಳಗಿಂದ ಲಕ್ಷ್ಮಿದೇವಿಯು ಹೊರಟು
ಬಂದು ನಿಮ್ಮ ದ್ರವ್ಯ ನಿಮಗೆ ಮುಟ್ಟಿತೆಂದು ಹೇಳಿ ಒಪ್ಪಿಸಿ ಅದೃಶ್ಯವಾಗುವಳು.
ಕಲ್ಲು ಕೋಳಿ ಕೂಗೀತು ; ಮುಲ್ಲನು ಬಂದು ಚೂರಿ ತಾಕುವನು. ಸುತ್ತ
ಮೂರು ಗಾವುದ ಸುದ್ದಿ ಕೇಳ್ಯಾರು. ಅಲ್ಲಿಂದ ಕೊಲ್ಲುಪಾಕಿ ಸೋಮನಾರಾಧ್ಯರ
ಬಳಿಗೆ ಬಂದಾರು. ಪುಷ್ಯ ಶುದ್ಧ 5 ರಲ್ಲಿ 4000 ಜಂಗಮಾರ್ಚನೆ ಮಾಡ್ಯಾರು.
ಅಲ್ಲಿಂದ ಕಲ್ಯಾಣಕ್ಕೆ ಬರುವುದರೊಳಗೆ ಏನು ಅಗುವುದೆಂದರೆ, ಭುವನವೇ
ಭೂಕೈಲಾಸವೆನಿಸುವುದು. ಎಲ್ಲಿ ನೋಡಿದರಲ್ಲಿ ಭೋಗ ಭಾಗ್ಯಾನಂದವಾದೀತು.
ಪ್ರಭವನಾಮ ಸಂವತ್ಸರದಲ್ಲಿ ಚಾಲಕಿಗೆ ಬಂದಾರು. ಅಲ್ಲಿ ಬಲಿಕೇಶ್ವರನ
ದರ್ಶನ ಮಾಡಿಕೊಂಡು 3 ಕೋಟಿ ಲಿಂಗ ಬಯಲಿಗೆ ಬಂದಾವು. ಇಂದಿ
ಷ್ಟನ್ನೂ ಪೂಜೆಯಂ ಮಾಡಿಸಿ, 69 ಸಾವಿರ ಜಂಗಮಾರ್ಚನೆಯನ್ನು ಮಾಡಿಸಿ
ಕೊಂಡು ಕಲ್ಯಾಣಕ್ಕೆ ಬಂದಾರು. ಗಣಂಗಳನ್ನೆಲ್ಲಾ ಕರೆಯಲಿಕ್ಕೆ ದೊರೆ, ಗೌಡ,
ಮಂತ್ರಿ, ಪ್ರಜೆ ಪಾಲಕರೆಲ್ಲರಂ ಕರೆಸಿ ಈ ಪ್ರಕಾರ ಕಳುಹತ್ತಾ ಬಂದಾರು.
ಪರಿಪರಿಯ ವಾದ್ಯದಿಂದ ಬೂರುಗ, ತಮಟೆ, ಈಟೆ, ನಿಸಾಳ, ಮೃದಂಗ, ಭಜಂತ್ರಿ
ಸುರವನ್ನೈಶ್ವರ್ಯದಿಂದ ಕುಂಡಲೇಶ್ವರನ ದರ್ಶನವಂ ತೆಗೆದುಕೊಂಡು ಈ ಸಭಾ
ಮಂಟಪಕ್ಕೆ ಬಂದಾರು. ಲೋಕಪಾವನಮೂರ್ತಿ ಚೆನ್ನಬಸವ ರಾಜದೇವರು
ವೀರವಸಂತರಾಯರು, ಅಕ್ಕ ನಾಗಲಾಂಬಿಕೆಯು ಬಂದಾರು. ಅಕ್ಕನಾಗಲಾಂಬಿ
ಕೆಯು ದರ್ಶನವನ್ನು ತೆಗೆದುಕೊಂಡು ನೋಟ ಹರುಷದಿಂದ ನೋಡ್ಯಾರು.
ನರದೇಹವಾದಾಳು. ಸಮಸ್ತಗಣಂಗಳೂ ಕೂಡಿ ಬಿಜ್ಜಳನ ಅರಮನೆಗೆ
ಬಂದಾರು. ಶಾಪುರಿ ಪೇಟಿಗೆ ಕವಲು ಕೊಟ್ಟಾರು. ಸುತ್ತ ಕೋಟೆಗಳು ಕಟ್ಟಿ
ಸ್ಯಾರು. 9 ಗಜ ಭೂಮಿ ಬಿಚ್ಚಿ ಪ್ರಭು ಸಿಂಹಾಸನ ಹೊರಟೀತು. ಆ ಮೇಲೆ
ಪ್ರಭವನಾಮ ಸಂವತ್ಸರದ ಚೈತ್ರ ಶುದ್ಧ 1 ಸೋಮವಾರ ರೇವತಿ ನಕ್ಷತ್ರದಲ್ಲಿ

12 ಘಳಿಗೆಯ ಮೇಲೆ ಮುಹೂರ್ತ ಮಾಡಿಸ್ಯಾರು. ಮಾಡುವ ಸಮಯದಲ್ಲಿ ತ್ರಿಪುರಾಂತಕದ ಕೆರೆ ನೀರು ಕಪ್ಪಾದವು, ಕಲ್ಲು ತೇರು ಬಯಲಾದೀತು. ತ್ರಿಪುರಾಂತಕದ ಕೆರೇ ಮೇಗೆ ಲಿಪಿಗಳನ್ನು ಓದುವುದು ಕರೆ ಮಲ್ಲಿಗೆ ಪುಷ್ಪವಾದಾವು. ಉನಗಾಪುರದ ಗಣೇಶನನ್ನ ಕಿತ್ತುಬಿಟ್ಯಾರು. 3 ಕೋಟಿ ದ್ರವ್ಯ ತೆಗೆದುಕೊಂಡು ವೀರವಸಂತರಾಯನಿಗೆ ಹೊನ್ನಿನ ಅಭಿಷೇಕ ಮಾಡಿಸ್ಯಾರು. ಬಿದನೂರು ಕೋಟಿಯೊಳಗೆ ವೀರಸಂಗಪ್ಪನ ಗದ್ದಿಗೆ ಸಮೀಪಕ್ಕೆ ಬಂದು ಕೋಟಿ ದ್ರವ್ಯವನ್ನು ತೆಗೆದಾರು. ಸಮಸ್ತದ್ರವ್ಯವಂ ಖರ್ಚುಮಾಡಿ ಕಲ್ಯಾಣ ಪಟ್ಟಣ ಕಟ್ಟಿಸುವರು. ದೆಸೆದೆಸೆಗೆ 11 ಯೋಜನ ಪ್ರಮಾಣ ಅದಕ್ಕೆ 360 ಬಾಗಿಲು, 770 ದಿಡ್ಡಿಗಳು, 96 ಚೋರದಿಡ್ಡಿ, ನವರತ್ನ ಕೆತ್ತಿಸಿದ ಕದಗಳು, ಸೂರ್ಯನ ಬೀದಿ, ಚಂದ್ರನಬೀದಿ, ಚನ್ನಬಸವರಾಜದೇವರ ಮಠದ ವಿಸ್ತಾರ ಏನೆಂದರೆ, ದೆಸೆದೆಸೆಗೆ ನಾಲ್ಕು ಯೊಜನದ ಪ್ರಮಾಣ ಅದರ ಬಾಗಿಲು, ವಿಭೂತಿ ಕದಗಳು, ವಿಭೂತಿ ಮುಸುಕು, ವಿಭೂತಿ ಹೊಸಲುಗಳು, ಸಮಸ್ತವೂ ವಿಭೂತಿಮಯವು ಮತ್ತೊಂದು ಬಾಗಿಲು ರುದ್ರಾಕ್ಷಿ, ಕದಗಳ ರುದ್ರಾಕ್ಷಿ ಮುಸುಕು, ರುದ್ರಾಕ್ಷಿ ಸೂಸಕ ಅಲ್ಲಿಯ ಪ್ರಮಾಣವು ಪಂಚಾಕ್ಷಯ ಶಾಸನವು ಮಿಕ್ಕ 36 ಬಾಗಿಲು ವಜ್ರ ವೈಡೂರ್ಯ ಮೊದಲಾದ ನವರತ್ನ ಕೆತ್ತಿಸಿದ ಕದಗಳು. ಅಲ್ಲಿ ಶಿವನ ಅಪೇಕ್ಷೆಯಿಲ್ಲದೆ ಇರುವವರುಂಟು. ಅಚಪ್ರಸಾದಿಗಳ ಮಠಗಳು 1,600 ಚಿಲುಮೆ ಅಗ್ಗಣಿ ಮಠ 1500 ಗುರುಲಿಂಗ ಜಂಗಮಕ್ಕೆ ತನು ಮನ ಧನಂಗಳು ಅರ್ಪಿಸುವ ಮಠಗಳು 1 ಲಕ್ಷ, ಇಂತಪ್ಪ ಕಲ್ಯಾಣ ಪಟ್ಟಣವನ್ನು ಮಾಡಿ 12,000 ವರುಷಗಳು, ಅವರ ವಂಶದವರು ಆಳಬೇಕು. ಚೆನ್ನಬಸವರಾಜ ದೇವರ ಇರುವುದು 36 ವರುಷ, ವೀರವಸಂತರಾಯನಿರುವುದು 60 ವರುಷ. ಆ ಮೇಲೆ ಬೈಲಿಗೆ ಬೈಲು ಆದಾರು. ಪ್ರಭವನಾಮ ಸಂವತ್ಸರದಲ್ಲಿ ಬಾರದಿದ್ದರೆ ಪ್ರಮಥರಾಣೆ, ಲಕ್ಷದ ಮೇಲೆ ತೊಂಭತ್ತಾರು ಸಾವಿರ ಗಣಂಗಳ ಪಾದದಾಣೆ, ಈ ಮಾತು ಸಟೆಯೆಂದವರಿಗೆ ಶ್ವಾನಸೂಕರ ಜನ್ಮ ತಪ್ಪದು. ಚಂದ್ರ ಸೂರ್ಯರಿರುವ ತನಕ ನರಕ ತಪ್ಪದು. ಇದು ಸಿದ್ಧಾಂತವೆಂದು ರುದ್ರಮುನಿಸ್ವಾಮಿಗಳು ನಿರೂಪಿಸಿದ ಕಾಲಜ್ಞಾನವು ಉದಯ ಕಾಲ, ಮಧ್ಯಾಹ್ನ, ಸಾಯಂಕಾಲದಲ್ಲಿ ಪಠಿಸಿದವರಿಗೆ ಧನಧಾನ್ಯ ಕನಕ ವಸ್ತು, ವಾಹನ ಛತ್ರ ಚಾಮರ ಅಂದಣ ಮೊದಲಾದ ಐಶ್ವರ್ಯವೂ, ಬ್ರಾಹ್ಮಣರು ನಿಂದೆ ಮಾಡಿದರೆ ಕಾಶಿಯಲ್ಲಿ ಗೋಹತ್ಯ ಮಾಡಿದ ಫಲವೂ, ಶಿವಭಕ್ತರು ನಿಂದೆ ಮಾಡಿದರೆ ಪರ್ವತದಲ್ಲಿ ಲಿಂಗದ್ರೋಹ ಮಾಡಿದ ದೋಷಕ್ಕೆ ಗುರಿಯಾಗುವರು. ಇದು ಸಿದ್ಧಾಂತವೆಂದು ರುದ್ರಮುನಿಗಳು ನಿರೂಪಿಸಿದ ಕಾಲಜ್ಞಾನವು.

ರುದ್ರಮುನಿ ಕಾಲಜ್ಞಾನ ಸಮಾಪ್ತವಾದುದು.

## ಯುಮ್ಮಯ್ಯ ಬಸವಣ್ಣನವರ ಕಾಲಜ್ಞಾನವು

ಕುಂಭಿಣಿ ಕೂಗೀತು ಜಂಬೂಕ ಹೊರಟೀತು. ಹುಯ್ಯಾಲಿ ಡಂಗೂರವ || ಜಂಬೂಕ ಕೋಡಗ ಜಗಳ ತಾವಾಡ್ಯಾವು ಹುಯ್ಯಾಲಿ ಡಂಗೂರವ|| ಹೊಗೆಬಂದಿ ಬಂದು ಜಗವಂದು ಆದೀತು || ನಗೆಗೇಡು ಆದೀತು ಶ್ರೀರಂಗಪಟ್ಣ || ಹು.... || ಬಲವುಳ್ಳ ಮಂತ್ರಿ ಚಲವು ತಾ ಕೆಟ್ಟೀತು || ಮನ್ಮಥಸಪದಾಂಕ ವೀರವಸಂತನು ಬರುವಾ ||ಹು....|| ಕಾನಕಾನರೆಲ್ಲ ದಕ್ಷಿಣಕ್ಕೆ ನಡೆದಾರು ||ಹು|| ಕಾನನಕ್ಕೆ ನಡೆದಂತೆ ದಕ್ಷಿಣ ಭಾಗದಿ || ಹು || ಶೀರ್ರ್ಯಾದರೋಗಾನ ಶಿರವನ್ನು ಕುಯಿದಾರು ||ಹು|| ತೋರಣ ಕಟ್ಟ್ಯಾರು ಬಾಗಿಲಿಗೆ ಅವನನ್ನು ||ಹು|| ಹಾರೋರ ಕೇರಿಲಿ ಹಾದರವು ಹೆಚ್ಚೀತು | ಜಾರೇರು ಹೆಚ್ಚ್ಯಾರು ಜಗವೆಲ್ಲ ಕೆಟ್ಟೀತು ||ಹು|| ತುರುಕ ದೆಸೆಯಿಂದ ಕಿರಿಕಿರಿ ಆದೀತು | ಅರ್ಥವುಳ್ಳವರೆಲ್ಲ ನೆತ್ತಿಯ ನೊಡೆದಾರು || ಹು || ಕಾಲನ ಬಾಧೆಯ ಮರೆತಾರು ತುರುಕಾರು || ಹು || ವಿಜಯನಗರದಲ್ಲಿ ಗಜಿಬಿಜಿಯಾದೀತು ||ಹು|| ಮಧ್ಯಕಲ್ಯಾಣ ಕೈಸೆರೆ ಹಿಡಿದಾರು || ಹು || ಬಡಗಾಪ ದೇಶದ ಹುಡುಗ ತಾ ಬಂದಾನು || ಹು || ಮಡದಿ ಮಕ್ಕಳು ಸಹಾಯವಾಗಿ ಬಂದಾರು ||ಹು|| ಮುನ್ನೂರು ಗಾವುದವನ್ನು ತಾನೇರ್ರ್ಯಾರು ||ಹು|| ಕನ್ನಡ ದೇಶಕ್ಕೆ ಕಡೆಮೊದಲಿಲ್ಲದೆ ಅನ್ಯಾಯ ಹೆಚ್ಚೀತು ಆತನ ದೆಸೆಯಿಂದ ||ಹು|| ಹನ್ನೆರಡು ವರುಷ ಕಡೆಗಾಲ ಅವನಿಗೆ ರಾಮೇಶ್ವರದಲ್ಲಿ ರಕ್ತಾವ ತೊಳೆದಾರು || ಹು || ರಾಮಲಿಂಗನ ಪೂಜೆ ಕಾಮಸತಿ ದಾರು ||ಹು|| ಅಲ್ಲಿ ಕತ್ತಾಲು ಕವಿದೀತು ಕರ್ಮ್ಮವು ಹೆಚ್ಚೀತು | ಅಲ್ಲಿ ಇದ್ದವರೆಲ್ಲ ನೆತ್ತಿಲನಯ ನೋಡೆದಾರು ||ಹು|| ಕಾಬಾಧೆಯನರಿತಾರು ತುರುಕಾರು | ಬಿದಿರ ಪ್ಪಾನಹಳ್ಳಿ ಠಾಣ್ಯವಮಾಡ್ಯಾರು ||ಹು|| ರಾಯನ ಹೆಸರನು ಅರಿಯನು ಆತನೂ ಆವಾಗ ಹುಸ್ಸೇನಿ ಛಲವು ತಾ ಕೆಟ್ಟೀತು ||ಹು|| ರಾಮನ ದೆಸೆಯಿಂದ ಶೀಮೆಯ ಬಿಟ್ಟ್ಯಾರು ||ಹು|| ಸೂರಾಮಾರನ ದ್ರವ್ಯವಿಶವಿನ್ನು ಆದೀತು ||ಹು|| ಗಿಡಗಭಕ್ತರೆಲ್ಲ ಗಿಡಾಗನ ಕಟ್ಟ್ಯಾರು ||ಹು|| ನಡೆದುಬೋದೀತು ರೂಢಿಯ ದೇಶಕ್ಕೆ ||ಹು|| ರಾಮರಾಜರ ದಂಡು ಶೀಮೆಯ ಹಿಡಿದಾರು | ಕಾಮಲಪುರದ ಬೈಲಲಿ ನಿಂತಾರು | ಹೇಮಕೂಟಕ್ಕೆ ಪ್ರೇಮದಿಂ ಬಂದಾರು ||ಹು|| ಕಾಮಿತಫಲಗಳ ಬೇಡುತ್ತ ಕೊಡುವಾರು ||ಹು|| ಹುಗ್ಗಿಯ ಹುಯಿಸಾರು ವಿಜಯಾನಗರಕ್ಕೆ ||ಹು|| ನಗಾನಾಲರ ಮನೆಗಳು ಕಟ್ಟ್ಯಾರು ||ಹು|| ಸ್ವರ್ಗಲೋಕ ಮೆಚ್ಚಿ ಭರ್ಗನ ಕೃಪೆಯಿಂದೆ ಎಂಟು ವರುಷಕೆ ||ಹು|| ಸುಂಟರಗಾಳಿ ಎದ್ದೆಂಟು ವರ್ಷಕ್ಕೆ ||ಹು|| ಕಂಟಾಕ ಅವನಿಗೆ ದೊರಕೀತು ಆವಾಗ ಸತ್ಯವನ್ನೇ ಬಿಟ್ಟು ಹುಚ್ಚೆದ್ದು ತಿರುಗ್ಯಾರು ||ಹು|| ಮೋಹಚಾರ ರಚ್ಚೆದ್ದು ಮುಸಗೀತು ಮುಂದಿನ್ನು ||ಹು|| ತಾನೆ ನಡೆದೀತು ರೂಢೀಯ ದೇಶಕ್ಕೆ ||ಹು|| ಬಿಟ್ಟಪಟ್ಟಣ ಬಿಡದೆ ತಾನಾಳ್ಯಾನು ||ಹು|| ಸಟಿ

ಯಲ್ಲ ಈ ಮಾತು ಶಿವನಾಣೆ ಮುಂದಿನ್ನೂ ||ಹು|| ತುಂಗಭದ್ರೆ ಭೀಮಾರತಿಗಾಗಿ ಬಂದಾರು ||ಹು|| ಗಂಗೆಗೆ ಬಂದಾರು ಗೋದಾವರಿ ನದಿಯ ತೀರ್ಥಕ್ಕೆ ||ಹು|| ವಾರಾಣಿ ಅಲ್ಲಿ ರಾಮನ ತೀರ್ಥಕ್ಕೆ ||ಹು|| ಕಾರುಣ್ಯಸ್ಥಳಗಾಳ ಮಾಡ್ಯಾರು ಮುಂದಿನ್ನು ||ಹು|| ಪಾಂಡೋರಂಗಗೆ ಹೋಗಿ ವಿಠಲನ ತೆಗೆದಾರು | ತಕೊಂಡು ಬಂದಾರು ವಿಜಯನಗರಕ್ಕೆ || ನಂಬಿ ಹೇಳಿದ ಮಾತು ಯಮ್ಮಯ್ಯ ಬಸವಣ್ಣ ||ಹುಯ್ಯಾಲಿ ಡುಗೂರವಾ||

# ನೀಲಮ್ಮನವರ ಕಾಲಜ್ಞಾನವು

ಸುವ್ವಿ ಬಾ ಸಂಗಯ್ಯ | ಸುವ್ವಿ ಬಾ ಲಿಂಗಯ್ಯ | ಸುವ್ವಿ ಬಾ ಚನ್ನಬಸವಯ್ಯ ಸುವ್ವಿ ||ಸ|| ಸುವ್ವಿ ಬಾ ಚನ್ನಬಸವಯ್ಯ ಬರುವಾಗ ಹುಯ್ಯಾಲುಬೊಬ್ಬೆ ಜಗಕೆಲ್ಲ || ಅಕ್ಕನಾಗಮ್ಮನು ಚಿಕ್ಕವನಿಕೆಯ ಪಿಡಿದು ಅಕ್ಕಿವಮ್ಮಾವ ತೊಳಿಸುತ್ತ ||ಸು|| ಅಕ್ಕಿವಮ್ಮಾನ ತೊಳಿಸುತ್ತ ಪಾಡಿದರು ಮುಕ್ಕಣ್ಣ ಶಿವನು ಬರುವಾಗ ||ಸು|| ಕಂಟ್ಯೋಣ ಬನ್ನೀರಿ ಪಟ್ಟಣದ ಸತಿಯಾರು ಹುಟ್ಟು ಕರ್ಮಗಳು ಅಳಿವಂತೆ ||ಸು|| ಹುಟ್ಟು ಕರ್ಮಗಳ ಅಳಿವಂತೆ ತೊಳಸುತ್ತಾ ಪಟ್ಟಣಕ್ಕೆ ಶಿವನು ಬರುವಾಗ ||ಸು|| ನಮ್ಮಯ್ಯ ಬರುವಾಗ ಉಮ್ಮಾಯ ಶರಣಾರು ಕರ್ಮದ ಲೋಕವುಳಿಯಾವು || ಕರ್ಮದಲೋಕ ಉಳಿಯಾವು ಮುಂದಿನ್ನು ಧರ್ಮದ ಗುರುಬಸವ ಬಿರುವಾಗ || ಕೌರಣೀಕವು ದಿನವು ಮುಂದಿನ್ನು ಘೋರ ಪಾತಕ ದಿನ ಬಂತು ||ಸು|| ಏಳೂರಿಗೊಂದೂರ ಏಳು ಸುತ್ತಿನ ಕೋಟಿ ಹಾಳಾಗುತ್ತದೆ ಜಗವೆಲ್ಲಾ || ಹಾಳಾಗುತ್ತಾವೆ ಜಗವೆಲ್ಲ ಮುಂದಿನ್ನು ಖೂಳರಕ್ಕಾಸಿ ಬರುವಾಗ ||ಸು|| ದಿನಮಾನೆ ದುರ್ಗಿಯು ಅನುವಾಗಿ ಬರುವಾಗ ಮನುಜಾರ ದುಃಖ ವಿಪರೀತಾ ||ಸುವ್ವಿ|| ಮನುಜಾರ ದುಃಖ ವಿಪರೀತ ಮಹಮಾಯಿ ಘನದಂಡು ಕೂಡಿ ಬರುವಾಗ ||ಸು|| ಆಗಾರ ಅಳಿದಾವು ಗೂಗೆಗಳ್ಬಿದಾವು ಕಾಗೆ ದಂಡು ಬರುವಾಗ ||ಸು|| ಕಾಗೆಯ ದಂಡು ಬರುವಾಗ ಜಗವೆಲ್ಲ ಕೂಗು ಬೊಬ್ಬೆಗಳು ಮನೆಮನೆಗೆ ||ಸು|| ಅಣ್ಣಗಳ ದಿನಗಾಳು ಹಣ್ಣಾಗಿ ಬರುವಾಗ ಕಣ್ಣೀಲಿ ಕಾಣೆವೆನಬ್ಯಾಡೀ ||ಸು|| ಕಣ್ಣೀಲಿ ಕಾಣೆವೆನಬ್ಯಾಡಿ ಮುಂದಿನ್ನು ಮಣ್ಣಾ ಹುಯಿಕೊಂಬೋ ದಿನ ಬಂತು ||ಸು|| ಅಗ್ನಾನ ದಿನಗಾಳು ನುಗ್ಗುತ ಬರುವಾಗ ಸುಗ್ಗಿ ಹೋಳಿಗೆ ಕನಸೀನ ||ಸು|| ಕಾಣದೆ ಬೊಬ್ಬೆ ಹುಯಿಕೊಂಬೊ ದಿನ ಬಂತು ಬೀಸಿತು ಬಿರುಗಾಳಿ ಈಶಾನ್ಯ ದಿಕ್ಕೀಲಿ ದೇಶಮಂಡಲವ ಮುಸುಕೀತು ||ಸು|| ದೇಶಮಂಡಲವ ಮುಸುಕೀತು ಕೆಂಧೋಳು ಮೋಸ ಮಾಡುವದು ಮಳೆಗಾಲ ||ಸು|| ಬಚ್ಚಲದೊಳಿಹಗಾಳು ಹಸ್ತಾಯ ಶರಣಾಗೆ ಎಚ್ಚರಿಕೆರ ಬೇಕು ಉದಕಕ್ಕೆ ಈ ಮಾತು ಹೆಚ್ಚು ನುಡಿಯೆಂದು ಎನಬ್ಯಾಡಿ ||ಸು|| ಕತ್ತಲೆ

ಜ್ಯೋತಿಯ ಮುತ್ತಿ ತಾ ನುಂಗುವಳು ಹೆತ್ತ ತಾಯಿಯ ಮಗಳು ಅನುಕೈಕ್ಯ ಮಾಡುವಳು ಇದರರ್ಥ ಮನುಜರಿಗೆ ತಿಳಿಯಾದು ॥ ಸು ॥ ಅಟ್ಟಾ ಅಡಿಗೆಯನು ಉಂಟ್ಯೊದು ನುಂಗುವುದು ಶರಧೀಯ ! ಉಟ್ಯೊಂದು ನುಂಗುವುದು ಶರಧೀಯ ಚನ್ನಬಸವ ಹುಟ್ಟಿ ತಾನೆದ್ದು ಬರುವಾಗ ॥ ಸು ॥ ಶರಣಾರ ವಾಕ್ಯದಿಂ ವೀರ ವಸಂತ ಬುಟ್ಟಿ ವರುಣದಿಕ್ಕಿಗೆ ಬಂದು ಕುಳಿತಾನು ವರುಣದಿಕ್ಕಿಗೆ ಬಂದು ಕುಳಿ ತಾನು ವಸಂತ ಕಿರಣ ಸೂರ್ಯನ ಬೆಳಕೀಲಿ ! ಸು ॥ ಶಾಪಕ್ಕೊಳಗಾದವರು ಭೂಪ ರಿಬ್ಬರು ಕೂಡಿ ಶ್ರೀ ಪರಂಜ್ಯೋತಿ ಕಲ್ಯಾಣಕ್ಕೆ ಬರುವಾಗ ॥ ಸು ॥ ನಾರಿ ನೀಲ ಮ್ಮಾನು ಸಾರಿ ಹೇಳಿದಮಾತು ವೀರವಸಂತ ಚನ್ನಬಸವಾ ॥ ಸು ॥ ವೀರವಸಂತ ಚನ್ನ ಬಸವಣ್ಣ ಶರಣರಿಗೆ ಸಾರಿದ ಪಟ್ಟ ಅವರಿಗೆ ॥ ಸುವ್ವಿ ॥

—o—

ಸುಳ್ಳು ಸುಳ್ಳೆನುತಾರೆ ಕಾಲಜ್ಞಾನ ಸುಳ್ಳಾಗಬಹುದೇನೋ ಕಾಲಜ್ಞಾನ | ಸುಳ್ಳಾಗಬಲ್ಲುದೇನೋ ಕಲ್ಯಾಣದೇವರು ಹೇಳಿದ ಮಾತು ಸಟೆಯಲ್ಲ ಬಲ್ಲವರು ಬಲ್ಲರಣ್ಣ ॥ ೧ ॥ ಅಣ್ಣತಂಗಿಯ ಹೋಲೊಲ್ಲೆ | ಮುಂದಿನ್ನು ಸಣ್ಣನಾಮದವನು ಬರುವುದಿಲ್ಲೆ ಬಣ್ಣಾದ ಅರಮನೆಗೆ ಹಾಳುಬಿದ್ದಂತದನು ಕಣ್ಣೀಲಿ ಕಾಣಲಿಲ್ಲೆ ॥ ೨ ॥ ಕದಕೇಳವತ್ತಲಿಲ್ಲೆ ಒಡಹುಟ್ಟಿದಕ್ಕನ ಹೋಗಲಿಲ್ಲೆ | ಒಡವರು ಬಡಿದಾಡಿ ಮನೆ ಮನೆಕೂಳಿಗೆ ಭಿಕ್ಷವನು ಬೇಡಲಿಲ್ಲೆ ॥ ೩ ॥ ಸನ್ಯಾಸಕೆಟ್ಟದಿಲ್ಲೆ ॥ ಹೊನ್ನು ಅರದಿ ಗರು ಅಣಿಯಲಿಲ್ಲೆ ಅನ್ಯಾಯ ಹೆಚ್ಚಾಗಿ ಅಷ್ಟದಿಕ್ಕಿನ ಸೂರ ಇನ್ಯಾರು ಕಾಣಲಿಲ್ಲೆ ರಂಡೆಯರು ಮನೆಮನೆಗೆ ಅಣ್ಣಾ | ಗರ್ಭಿಣಿಯರಾಗಿ ಕೆಡುವರಣ್ಣಾ | ಗಂಡಗು ಮಿಂಡಗು ಒಂದೆ ಪಂಕ್ತಿಯಲ್ಲಿ ಊಟದಂಡಪೂರಿಗೆಗಣ್ಣ ॥ ೫ ॥ ಹೊಲೆಮನೆ ಉದ್ಯೋಗವು ಕೆಟ್ಟು ಮಳೆಬೆಳೆಗಳತಿ ಶೂನ್ಯವು ಹಲವು ಪರಿಯಲಿ ಚಿಂತೆ ಸುಖ ಜನರಿಗೆ ಇಲ್ಲಾ ಕಲಹ ಊರೂಗರಿಣ್ಣಾ ॥6॥ ಧರ್ಮ್ಮವು ಮುಳುಗಲಿಲ್ಲೆ ಮನೆ ಮನೆಗೆ ಕರ್ವವು ಹೆಚ್ಚಲಿಲ್ಲೆ ಅರಮನೆಯವರ ನಾಲಿಗೆ ತಪ್ಪಿ ರೊಕ್ಕವನು ನೇಮ ನೇಮದಿ ಸುಲಿಯಲಿಲ್ಲೆ ॥7॥ ಅರಸು ಆಳಾಗಲಿಲ್ಲೆ ಜಗದೊಳಗೆ ಗರತಿ ಸೂಳ್ಯಾಗ ಲಿಲ್ಲೆ ನರಗುರುವೆನಿಸಿ ನಲಿದಾಡೋದಿಲ್ಲೆ ಸುರೆಯ ಸರ್ವರು ಕುಡಿಯೋದಿಲ್ಲೇ | ಕಳವು ಬಹಳೆಚ್ಚಲಿಲ್ಲೆ | ಕಲಿಯೊಳಗೆ ಅತ್ತೇ ಅಳಿಯನ ಹೋಗಲಿಲ್ಲೆ | ಕೂಳುಗಳು ಬಹಳವಾಗಿ ಹಿರಿಯರೊಳಗೆ ಮರಿಯಾದೆ ತಪ್ಪಲಿಲ್ಲೆ ॥ ಕ್ರಿಯೆಗಳು ತಪ್ಪಲಿಲ್ಲೇ | ತಾಯಿಗೆ ಮಕ್ಕಳು ಹೋಗಲಿಲ್ಲೆ ॥ ಬಾಯಿ ಬಿನ್ನಾಣ ಮಾತು ಒಳಗೊಂದು ಹೊರ ಗೊಂದು ಚಾಯುವನು ಕಲಿಯಲಿಲ್ಲೆ ॥ ಭವಿ ಭಕ್ತರಾಗಲ್ಲಿಲ್ಲೆ | ಶಿವ ಭವಿಯನು ಹೋಗಲಿಲ್ಲೆ | ಭಾವನರಿದು ನೀ ಹೋಗು ನ್ಯಾಯವನು ಹೇಳುವುದು ಕಲಿಯೊಳಗೆ

ಕಾಣಲಿಲ್ಲೆ || ಭಾಷೆಗೆ ತಪ್ಪಲಿಲೆ ಗಂಡನಿಗೆ ವಿಷಮದ್ದನಿಕ್ಕಲಿಲ್ಲೆ | ವೇಶಿಯರ ಗುರುತ್ಯಾಗಿ ಮನೆಯೊಳಗೆ ಇರುವನು ದೇಶದೊಳು ಕಾಣಲಿಲ್ಲೆ || ಜಂಗಮರುಕೆಟ್ಟು ದಿಲ್ಲೆ ಲಿಂಗಮನು ಕಳಕೊಂಡು ಕೆಟ್ಟುದಿಲ್ಲೆ || ಜಂಗುಳಿ ದೈವಾದ ಪೂಜೆ ಮಾಡು ವುದನು ಹೆಂಗ್ಯಾಟ ಕಾಣಲ್ಲೆ || ಮದಸೊಕ್ಕಿ ಮುರಿಯಲಿಲ್ಲೆ ಗದಗಿನೊಳು ತೇರನ್ನುಯ್ಯಲಿಲ್ಲೆ 1 ಕಂದಿದುರಂಗಾಸು ಹಾಳಾಗಿ ಹೋದವನು ಸಾಧಿಸನೋಡ ಲಿಲ್ಲೆ || ಇಷ್ಟಾದರೂ ತಿಳಿಯಲಿಲ್ಲೆ ಮೌನಯ್ಯ ಪಟ್ಟಕ್ಕೆ ಬರುವುದಿಲ್ಲೆ | ಕಷ ಕಾಲವು ಬಂತು ನಾಚಿಕೆ ಬರಲಿಲ್ಲ ದುಷ್ಟರಿಗೆ ಉಳವಿಲ್ಲವಲ್ಲೆ ||

—०—

# ಜ್ಞಾನಮಾರ್ಗ ತತ್ವಗಳು

ಜಂಗಮರ ಪೆರಿಯೆಂತು ಲಿಂಗೈಕ್ಯಪಥದಲ್ಲಿ | ಲಿಂಗ ಜಂಗಮರೆಂಬುದು ಪೇಳಿರಣ್ಣಾ ||ಪ|| ಷಡುಸ್ಥಲದ ನೆರೆಯೆಂತು ಮೃಡನಿರ್ಪ ಅರುವೆಲ್ಲಿ ಷಡಮೃಡ ಸ್ಥಳದೊಳಗೆ ಅಡಗಿರುವುದೆಂತೂ || ನಡೆನುಡಿಗಳನು ನಂಬಿದಡಪೆಂದು ಪೇಳಿದಿರಿ | ಮೃಡನೊಡನೆ ಬೆರೆತು ನಡೆವರೆ ಜಂಗಮರು ||1|| ಜಂಗಮದ ಪಾದೋದಕದ ಪರಿಯೇ | ಶೋಭಿಸುವ ಕ್ರಮವನೂ ಶೋಸಿದುದುಕವನು ಸವಿದುಂಬಿತೆಂತೂ | ನಾದವಡಗಿರುವಂತೆ ನಾಳಬಂಧವೆಲ್ಲಿ | ಇದರಾದಿಯನು ತಿಳಿದವರು ಆದಿಜಂಗ ಮರು ||2|| ಅಷ್ಟವಿಧ ದೇವತಾರ್ಚನೆಯ ನಿಷ್ಟೆಮಾಡುವ ಜ್ಞಾನಿ | ಅಷ್ಟಪೂಜೆಗೆ ಸೃಷ್ಟಿಯೊಳಗಿಹುದು | ಸೃಷ್ಟಿಯೊಳಗೊಪ್ಪಿರವನಿವನಿರುವ ಅರುವೆಲ್ಲಿ | ಇದರಿಷ್ಟ ವನು ತಿಳಿದವರು ನಿಷ್ಟೆಜಂಗಮರೂ ||3|| ಪರಮ ಪ್ರಸಾದವನು ಹುರಿಗೊಳಿಪ ತಾನೆಂದು | ಪಿರಿದೆಂಬೊ ಶಿವನಿರುತ ನೆಲೆಯಾವದೆಂದೂ | ಗುರುವೇ ಗತಿಯೆಂದು ಅರುವು ನಿಶ್ಚಯಮಾಡಿ ಈ ಅರುವಿಯೊಳು ಬೆರೆತರು ಪರಮ ಜಂಗಮರೂ ||4|| ಅಕಾರ ಉಕಾರ ಮಕಾರವೆಂತೆಂಬೊ ಓಂಕಾರ ನಾದ ಸದ್ಗುರುವಿನಂಘ್ರಿಯೊಳು || ತಾ ಕೂಡಿ ಬೆರೆದಿರ್ಪ ಅವಧೂತ ಮುರಹರಿಯು | ಓಂಕಾರದೊಳಗೊಪ್ಪಿದರು ಜಂಗಮರೂ ||5||

# ಸರ್ವಜ್ಞಮೂರ್ತಿಯ ಕಾಲಜ್ಞಾನವು

ಬಸವನೆನಗೆ ನಿರೂ | ಪಿಸಿದಾ ಕಾಲಜ್ಞಾನ | ಭಸವನು ಇಟ್ಟು
ಮರ್ತ್ಯರಿರವನು ನಿಮ್ಮ | ಶಿಶುವಾಗಿ ಪೇಳ್ವೆ | ಸರ್ವಜ್ಞ ||1||

ನಂಬಿ ಹೇಳುವೆ ಬಸವ | ನಿಂಬಿನಾ ಮಹಿಮೆಯನು | ಶಂಭುವಿನ
ಕರುಣ ನಿಮಗುಂಟು ನಾವು | ನಂಬಿ ಹೇಳುವೆನು ಸರ್ವಜ್ಞ ||2||

ಒಪ್ಪ ಭಸಿತನ ಪಟ್ಟು | ಕರ್ಪೂರ ವೀಳೆಯ ಕೊಟ್ಟು ಕಪ್ಪುಗೊರಳನಾ
ಕರುಣದಿಂ ನಿದನರಿತು | ಒಪ್ಪಿ ಹೇಳಿದೆನು ಸರ್ವಜ್ಞ ||3||

ಮಳೆಗಳನು ಕುಡಿಯುವನು | ಬೆಳೆಗಳನು ಮುಕ್ಕುವನು | ಬಳಗಗಳನೆಲ್ಲಿ
ಮುರಿಯುವನು ಜಗದೊಳಗೆ | ಉಳಿವವರೆ ಇಲ್ಲ ಸರ್ವಜ್ಞ ||4||

ವೀರಬಸವಂತನು | ಧೀರ ಬಿಜ್ಜಳ ತಾನು | ವಿಾರಿ ಕಲಿದೇವ
ನಡೆದಾನು ಅವನೊಡನೆ | ಹೋರುವವರಿಲ್ಲ ಸರ್ವಜ್ಞ ||5||

ಆಗಮಗಳಳಿದಾವು | ಗೂಗೆ ಪುರಕಿಳಿದಾವು | ಕಾಗೆಗಳು ಎದ್ದು
ಬಡಿದಾವು ಥೊರೆಗಳುರೆ | ಮೂಗರಾದಂದು ಸರ್ವಜ್ಞ ||6||

ಧಾರುಣಿಯು ನಡುಗುವುದು | ಮೇರು ಅಲ್ಲಾಡುವುದು | ವಾರಿನಿಧಿ
ಬತ್ತಿ ಬಯಲಹುದು | ಶಿವಭಕ್ತಿ | ಏರದಿಹುದಂದು ಸರ್ವಜ್ಞ ||7||

ಹರನ ಗಿರಿಗುಡಿಗಳಲಿ | ಸುರೆ ಮಾಂಸ ಮಾರೀತು | ಶರಣರ್ಗೆ
ಹರಣ ಪಿರಿದಾಗಿ ಜಗದಲ್ಲಿ | ಹರದಾಳಿ ನೋಡ ಸರ್ವಜ್ಞ ||8||

ಆರೆದಾರು ಮೆರೆದಾರು | ಉರಿದಾರು ಜಗದೊಳಗೆ | ಕುರಿಗಳಾ
ತಲೆಯ ತರಿದಂತೆ ರಕ್ತವನ್ನು | ಸ ರಿದಾರು ನೋಡ ಸರ್ವಜ್ಞ ||9||

ಹೆತ್ತ ತಂದೆಯ ಕೊಂದು | ಮತ್ತದಿಂ ವಿರೂಪಾಕ್ಷ | ಚೆತ್ತಲೆಯ
ಹೆಣ್ಣಿಗೊಳಗಾಗಿ ರಾಜ್ಯವದು | ಕತ್ತಲಾದೀತು ಸರ್ವಜ್ಞ ||10||

ನರರ ಬಲಿಗಳ ಕೊಟ್ಟು | ಕುರಿ ಕೋಣಗಳ ಕಡಿದು | ಸರುವ
ಭಂಡಾರವನು ಒಡೆದು ಸರುವರಾ | ಶಿರಗಳರಿದಾರು ಸರ್ವಜ್ಞ ||11||

ಆಳುವನು ಮುನಿಪುರವ | ಕಾಳಗವು
ಸೂಳೆಯಲಿ ಮಗ ಹುಟ್ಟಿ | ಆಳುವನು |
ಇಲ್ಲದವ ಮಡಿಯೆ ಪುರವೆಲ್ಲ | ಕೋಳು ಹೋದೀತು ಸರ್ವಜ್ಞ ||12||

ಚಂದ್ರ ಸೂರ್ಯರ ಗ್ರಹಣ | ಒಂದೇ ಮಾಸದಿ ಬಂದು | ತಂದೆಯಾ
ಕಂದನಿರದಂದು ಲೋಕಕ್ಕೆ | ಬಂದೀತು ಪ್ರಳಯ ಸರ್ವಜ್ಞ ||13||

ಪಟ್ಟವಿಲ್ಲದ ಶಿಶುವು | ಸೃಷ್ಟಿಯನು ಆಳೀತು | ಪಟ್ಟದರಸುಗಳು
ಅಳಿಯಲಾ ಜಗವವನ | ಪಟ್ಟಣ ಕಾಣಯ್ಯ ಸರ್ವಜ್ಞ ||14||

ಬಂಟನಾ ತಮ್ಮನಾ | ಅಳಿಯಗೂ ಮಾವಗೂ | ಗಂಟಿಕ್ಕಿ ಜಗಳ
ಹೆಣ್ಣಿಲಾ ಜಗಕೆಲ್ಲ | ಕಂಟಕವು ಎಂದು ಸರ್ವಜ್ಞ ||15||
ರಂಗಪಟ್ಟಣದೊಳಗೆ | ರಂಗಭಕ್ತರು ಹುಟ್ಟಿ | ರಂಗನಾ ಪೂಜೆ
ಬರಿದಾಗಲಾ ಪಟ್ಣ | ಭಂಗವಾದೀತು ಸರ್ವಜ್ಞ ||16||
ಉತ್ತರದ ದಿಕ್ಕಿನಲ್ಲಿ | ಹತ್ತೀತು ಹೆಬ್ಬೇಗೆ | ಸುತ್ತುವರಕೊಂಡು
ಬರುವಾಗ ಜಗವೆಲ್ಲಾ | ಕತ್ತಲಾದೀತು ಸರ್ವಜ್ಞ ||17||
ಎತ್ತು ಹೇರುವನಿಂದ | ತೊತ್ತಿನಾಮಗಳಿಂದ | ಮುತ್ತು ಮಾರುವನ
ದೆಸೆಯಿಂದ ಜಗಕೆಲ್ಲ | ಕುತ್ತು ಕಾಣಯ್ಯ ಸರ್ವಜ್ಞ ||18||
ಮುತ್ತೊಡೆದು ಹತ್ತಿರಲು | ಮತ್ತಾನೆ ಸತ್ತಿರಲು | ಹುತ್ತವನು
ಏರಿ ನರಿಕೂಗೆ ಜಗಕೆಲ್ಲ | ಕುತ್ತ ಕಾಣಯ್ಯ ಸರ್ವಜ್ಞ ||19||
ಕುಂಬಾರ ಹೊಟ್ಟೆಯಲಿ | ಪಿಂಜಾರ ಹುಟ್ಟುವನು | ಕುಂಭಿ ಕುಂಭಿ
ಗಳ ನಲಿಯುತಲಿ ಕುಂಭಿನಿಯೊಳಿಂಬುಗೊಂಡಾನು ಸರ್ವಜ್ಞ ||20||
ಸತ್ತು ಯೋಜನದೊಳಗೆ ಸತ್ತ ಹೆಣಗಳ ಸುತ್ತು | ಮುತ್ತಿದ್ದ
ಹದ್ದು ಕಾಗೆಗಳ ರಾಶಿ | ಕಣ್ಣೆತ್ತಿ ನೋಡೆಂದ ಸರ್ವಜ್ಞ ||21||
ಪೇಟೆಯಾ ಬಸ್ತಿಯನು | ಆಟದಲಿ ಒಡೆದಾರು | ಆಟದಲಿ
ಒಡೆದ ಆರಸೆಯ ವರಷಕ್ಕೆ ನೀಟಾಗಿ ಬರುವ ಸರ್ವಜ್ಞ ||22||
ಹೆಣ್ಣಿನಾ ದೆಸೆಯಿಂದ | ರಣ್ಯಕ್ಕೆ ನಡೆತಂದು | ಹಣ್ಣಿತ್ತು ಜಗಳ
ಗಚ್ಚಿಮುದ ಮಂತ್ರಿಗಳ | ಅಣ್ಣ ಬಂದಾನು ಸರ್ವಜ್ಞ ||23||
ಕಲ್ಲುಕೋಟೆಯಲೊಬ್ಬ | ಬಲ್ಲಿದನು ಕೆರೆಕಟ್ಟೆ | ಗೊಲ್ಲಗೊಲ್ಲರಾ
ಜಗಳದಲಿ ಜಗವೆಲ್ಲ | ತಲ್ಲಣವು ಎಂದ ಸರ್ವಜ್ಞ ||24||

**|| ಸಂಪೂರ್ಣಂ ||**

ಶ್ರೀ ಮಾವಿನಕೆರೆ ಪದ್ಮಾ ಪ್ರಿಂಟಿಂಗ್ ವರ್ಕ್ಸ್, ಬೆಂಗಳೂರು-19